ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 : ಸಂಚಿಕೆ 2 : ಫೆಬ್ರವರಿ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/– : ಬೆಲೆ ₹5



ಸಂಯುಕ್ತ ಸಹಕಾರಿಯ ನೂತನ ಕಚೇರಿಯ ಮುಂಭಾಗದಲ್ಲಿ ಆಡಳಿತಮಂಡಳಿ ಸದಸ್ಯರು



ನೂತನ ಕಚೇರಿಯ ನೋಟ...



## 25.1.2011 ರಂದು ಬೆಂಗಳೂರಿನಲ್ಲಿ ಹಾಗೂ 27.1.2011ರಂದು ಬೆಳಗಾವಿಯಲ್ಲಿ ನಡೆದ ಲೆಕ್ಕಪರಿಶೋಧಕರ ಕಾರ್ಯಾಗಾರ



ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ............2
ಸೌಹಾರ್ದ ಸಹಕಾರಿಗಳ ಸಮಾಚಾರಗಳು............3
ಅವಲೋಕನಾ ಸಭೆಗಳು............4,5
ಸೌಹಾರ್ದ ಸಹಕಾರಿ ದಿನಾಚರಣೆ............6,7
ನೇರ ತೆರಿಗೆ ವ್ಯವಸ್ಥೆ ಕಾರ್ಯಾಗಾರ............8
ಲೇಖನಗಳು............9,10
ಲೆಕ್ಕ ಪರಿಶೋಧಕರಿಗಾಗಿ ಕಾರ್ಯಾಗಾರಗಳು............11
ಠೇವುಗಳ ಮೇಲೆ ದ್ರವ್ಯಾಸ್ಥಿ ನಿರ್ವಹಣೆ............12


ಸೌಹಾರ್ದ ಸಹಕಾರಿಗಳ ಸಂಖ್ಯೆ : 1582 - 'ಇ' ಸ್ಟಾಪಿಂಗ್ ಕೇಂದ್ರಗಳ ಸಂಖ್ಯೆ - 326



# ಅಧ್ಯಕ್ಷರ ನುಡಿ....

ಪ್ರಜಾಪ್ರಭುತ್ವ ವ್ಯವಸ್ಥೆಯ "ಮುಕುಟಮಣಿ"ಯಂತಿರುವ ಸಮಾಜದಲ್ಲಿನ ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಸಾಮಾನ್ಯ ಮನುಷ್ಯನಿಗೆ ಆರ್ಥಿಕ ಶಕ್ತಿಯನ್ನು ನೀಡುತ್ತಿರುವ ಈ ಸಹಕಾರಿ ವ್ಯವಸ್ಥೆಗೆ ನೇರ ತೆರಿಗೆ ಮೂಲಕ ಗದಾಪ್ರಹಾರ ಮಾಡಲು ಹೊರಟಿರುವ ಕೇಂದ್ರ ಸರಕಾರದ ಈ ಕ್ರಮದ ಬಗ್ಗೆ ವ್ಯಾಪಕ ವಿರೋಧ ವ್ಯಕ್ತವಾಗಬೇಕು, ಪ್ರಚಾರವಾಗಬೇಕು. ಈ ಬಗ್ಗೆ ಚರ್ಚೆಯಾಗಬೇಕು ಹಾಗೂ ದೇಶಾದ್ಯಂತ ಸಹಕಾರಿಗಳ ಈ ವಿರೋಧ ಅಭಿಪ್ರಾಯವನ್ನು ಸೂಚಿಸುವ ಕ್ರಮ ಅಗತ್ಯವಾಗಿ ನಡೆಯಬೇಕು.

<u>1-4-2012 ರಿಂದ ಜಾರಿಗೆ ಬರಲಿರುವ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗಬಹುದಾದ</u>

## "ನೇರ ತೆರಿಗೆ ವಿಧೇಯಕ" ವ್ಯಾಪಕ ಪ್ರಚಾರ ಚರ್ಚೆ ಹಾಗೂ ಅಭಿಪ್ರಾಯ ಸೂಚಿಸುವ ಕ್ರಮ ಅಗತ್ಯ

ರಾಷ್ಟ್ರದ ಆರ್ಥ ವ್ಯವಸ್ಥೆಯಲ್ಲಿ ಸಹಕಾರಿ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು. ಒಂದು ಶತಮಾನಕ್ಕೂ ಹೆಚ್ಚು ಇತಿಹಾಸವಿರುವ ಸಹಕಾರಿ ಕ್ಷೇತ್ರ ಈ ದೇಶದ ಕೃಷಿಕರ, ಕೃಷಿಕಾರ್ಮಿಕರ, ಆರ್ಥಿಕವಾಗಿ ಹಿಂದುಳಿದ ವರ್ಗದವರ, ಮಹಿಳೆಯರ, ಯುವಜನರ ಹಾಗೂ ಸಮಾಜದ ಕಟ್ಟಕಡೆಯ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯ ಸಾಧನವಾಗಿ, ಆರ್ಥಿಕ ಅಸಮಾನತೆಯನ್ನು ನಿವಾರಿಸುವ ಅಸ್ತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿ ಕ್ಷೇತ್ರ ದೇಶದ ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ. ಲಾಭಗಳಿಕೆಯೊಂದೆ ಇದರ ಮುಖ್ಯ ಉದ್ದೇಶವಲ್ಲ. ಬಡಜನರ ಆರ್ಥಿಕ ಸಬಲೀಕರಣದ ಜೊತೆಗೆ ಸಮುದಾಯದ ಅರ್ಥಶಕ್ತಿಯನ್ನು ಹೆಚ್ಚಿಸುವ ವ್ಯವಸ್ಥೆ ಇದಾಗಿದೆ ಎಂಬುದನ್ನು ಮರೆತು ಕಂಪನಿ ವ್ಯವಸ್ಥೆಯೊಡನೆ ಈ ಸಹಕಾರಿ ವ್ಯವಸ್ಥೆಯನ್ನು ಸರಿದೂಗಿಸಿ ಸಹಕಾರಿ ಸಂಸ್ಥೆಗಳಿಗೂ "ನೇರ ತೆರಿಗೆ ವ್ಯವಸ್ಥೆ"ಯನ್ನು ಜಾರಿಗೆ ತರಲು ಉದ್ದೇಶಿಸಿರುವ ಕೇಂದ್ರ ಸರಕಾರದ ಕ್ರಮ ಖಂಡನೀಯ.

ಪ್ರಜಾಪ್ರಭುತ್ವ ವ್ಯವಸ್ಥೆಯ "ಮುಕುಟಮಣಿ"ಯಂತಿರುವ ಸಮಾಜದಲ್ಲಿನ ಆರ್ಥಿಕ ಅಸಮಾನತೆಯನ್ನು ನಿವಾರಿಸಲು ಸಾಮಾನ್ಯ ಮನುಷ್ಯನಿಗೆ ಆರ್ಥಿಕ ಶಕ್ತಿಯನ್ನು ನೀಡುತ್ತಿರುವ ಈ ಸಹಕಾರಿ ವ್ಯವಸ್ಥೆಗೆ ನೇರ ತೆರಿಗೆ ಮೂಲಕ ಗದಾಪ್ರಹಾರ ಮಾಡಲು ಹೊರಟಿರುವ ಕೇಂದ್ರ ಸರಕಾರದ ಈ ಕ್ರಮದ ಬಗ್ಗೆ ವ್ಯಾಪಕ ವಿರೋಧ ವ್ಯಕ್ತವಾಗಬೇಕು, ಪ್ರಚಾರವಾಗಬೇಕು. ಈ ಬಗ್ಗೆ ಚರ್ಚೆಯಾಗಬೇಕು ಹಾಗೂ ದೇಶಾದ್ಯಂತ ಸಹಕಾರಿಗಳ ಈ ವಿರೋಧ ಅಭಿಪ್ರಾಯವನ್ನು ಸೂಚಿಸುವ ಕ್ರಮ ಅಗತ್ಯವಾಗಿ ನಡೆಯಬೇಕು. ಇಲ್ಲವಾದಲ್ಲಿ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಇದೊಂದು ದೊಡ್ಡ ಮಾರಕಾಸ್ತ್ರವಾಗುತ್ತದೆಂದು ಸಹಕಾರಿಗಳ ಗಮನ ಸೆಳೆಯಬಯಸುತ್ತೇನೆ.

ನೇರ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಲು ಹೊರಟಿರುವ ಕೇಂದ್ರ ಸರಕಾರ, ರಾಷ್ಟ್ರದ ಅರ್ಥವ್ಯವಸ್ಥೆಯ ತತ್ವಗಳನ್ನು ಸಮಾನಾಂತರವಾಗಿ (Horizontal) ಸಮಾನೆತ್ತರವಾಗಿ (Verticle) ಸ್ಥಿರತೆ (Stable) ಹಾಗೂ ಸರಳತೆ (Simple) ಯಿಂದ ಕೂಡಿರಬೇಕಾಗುತ್ತದೆ ಎಂದು ರೂಪಿಸುವಾಗ ಈ ಎಲ್ಲ ತತ್ವಗಳಡಿಯಲ್ಲಿಯೆ ಸಹಕಾರ ಕ್ಷೇತ್ರ ಕಾರ್ಯನಿರ್ವಹಿಸುತ್ತಿದೆ ಎಂಬುದು ಮತ್ತು "ಶ್ರೀ ಸಾಮಾನ್ಯ"ನ (ಆಮ್ ಆದಮಿ) ಅಭಿವೃದ್ಧಿಯೆ ಸಹಕಾರಿ ಕ್ಷೇತ್ರದ ಮೂಲ ಧ್ಯೇಯ, ಮಂತ್ರ ಹಾಗೂ ಕಾರ್ಯತಂತ್ರ ಎಂಬುವ ವಿಷಯಗಳನ್ನು ಮರೆತಿರುವುದು ವಿಷಾದನೀಯ.

ಈ ಬಗ್ಗೆ ಈ ದೇಶದ ಸಹಕಾರಿ ಕ್ಷೇತ್ರದ ಸ್ವಯಂಸೇವಾ ಸಂಸ್ಥೆಯಾದ ಸಹಕಾರ ಭಾರತಿ ನೇತೃತ್ವದಲ್ಲಿ ನಾಗಪುರ, ಜೈಪುರ ಮತ್ತು ದಿನಾಂಕ 12/1/2011 ರಂದು ಬೆಂಗಳೂರಿನಲ್ಲಿ ಸನ್ನದು ಲೆಕ್ಕ ಪರಿಶೋಧಕರು ಸೇರಿದಂತೆ ಪ್ರಮುಖ ಸಹಕಾರಿಗಳ ಸಭೆಗಳು ನಡೆದಿವೆ. ಕೊನೆಯದಾಗಿ 4ನೇಯ ಸಭೆಯು ಮುಂಬೈನಲ್ಲಿ ನಡೆಯಲಿದ್ದು ನಂತರ ಮನವಿ ಸಿದ್ಧಪಡಿಸಿ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಅರ್ಥಸಚಿವರಿಗೆ ಯೋಜನಾ ಆಯೋಗದ ಅಧ್ಯಕ್ಷರಿಗೆ ಪಾರ್ಲಿಮೆಂಟಿನ ಸ್ಟಾಂಡಿಂಗ್ ಕಮೀಟಿಯ ಅಧ್ಯಕ್ಷರಿಗೆ ಸಲ್ಲಿಸುವ ಕ್ರಮ ಸ್ವಾಗತಾರ್ಹ ಹಾಗೂ ಅಭಿನಂದನೀಯ.

ಇದೇ ಮಾದರಿಯಲ್ಲಿ ದೇಶದ ಹಾಗೂ ರಾಜ್ಯದ ಎಲ್ಲ ಸಹಕಾರಿ ಸಂಸ್ಥೆಗಳಿಂದ ಕೇಂದ್ರ ಸರಕಾರ ಮೇಲೆ ಈ ನೇರ ತೆರಿಗೆ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರವನ್ನು ಹೊರತುಪಡಿಸಬೇಕೆಂಬುದರ ಬಗ್ಗೆ ಸಂಘಟನಾತ್ಮಕ ಹೋರಾಟ ಹಾಗೂ ಪ್ರತಿಭಟನೆಯ ನಿಲುವಿನ ಅರಿವು ಮೂಡಿಸುವ ಪ್ರಯತ್ನವಾಗಬೇಕೆಂಬುದು ಒಬ್ಬ ಸಹಕಾರಿಯಾಗಿ ಅಪೇಕ್ಷಿಸುತ್ತೇನೆ ಹಾಗೂ ಇದು ಸಂಯುಕ್ತ ಸಹಕಾರಿಯ ಅಪೇಕ್ಷೆಯೂ ಆಗಿದೆ. ತಾವುಗಳೆಲ್ಲ ಈ ಪ್ರಯತ್ನಗಳಿಗೆ ಸ್ಪಂದಿಸುತ್ತಿರೆಂದು ಆಶಿಸುತ್ತೇನೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು.

## ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ಪತ್ತಿನ ಸಹಕಾರಿಗೆ ನೂತನ ಕಚೇರಿ



ಗುಲ್ಬರ್ಗಾದ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ ನೂತನ ಕಚೇರಿಯನ್ನು ವಿಜಾಪೂರದ ಜ್ಞಾನಯೋಗಾಶ್ರಮದ ಪರಮಪೂಜ್ಯ ಶ್ರೀ ಸಿದ್ಧೇಶ್ವರಸ್ವಾಮಿಜಿಯವರು ಉದ್ಘಾಟಿಸಿ ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದರು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠ, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೋಡ ಮುಂತಾದ ಗಣ್ಯರು ಉಪಸ್ಥಿತರಿದ್ದರು. ಶ್ರೀ ರೇವಣಸಿದ್ಧ ಮಹಾಸ್ವಾಮಿಗಳು ಗದ್ದುಗೆಮಠ ಇವರು ಆಶೀರ್ವಚನ ನೀಡಿದರು. ಸಹಕಾರಿ ಅಧ್ಯಕ್ಷ ಶ್ರೀ ಸಂಜೀವ ಮಹಾಜನ ಅವರು ಎಲ್ಲ ಗಣ್ಯರನ್ನು ಸ್ವಾಗತಿಸಿ ಸಹಕಾರಿಯ ಸಾಧನೆಗಳ ಬಗ್ಗೆ ವಿವರ ನೀಡಿದರು.

## ತೀರ್ಥಹಳ್ಳಿಯಲ್ಲಿ ಸರಸ್ವತಿ ಸೌಹಾರ್ದ ಸಹಕಾರಿಯ ಉದ್ಘಾಟನೆ



ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಸರಸ್ವತಿ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ರಾಜ್ಯ ಸಹಕಾರಿ ಅಪೆಕ್ಸ ಬ್ಯಾಂಕಿನ ಅಧ್ಯಕ್ಷ ಶ್ರೀ ಆರ್.ಎಮ್. ಮಂಜುನಾಥಗೌಡರವರು ಉದ್ಘಾಟಿಸಿದರು. ಬ್ಯಾಂಕಿನ ಭದ್ರತಾ ಕೊಠಡಿಯನ್ನು ಮಾಮ್ಕೋಸನ ಉಪಾಧ್ಯಕ್ಷ ಹಿರಿಯ ಸಹಕಾರಿ ಶ್ರೀ ಕೆ.ನರಸಿಂಹನಾಯಕರವರು, ಕ್ಯಾಶ ಕೌಂಟರನ್ನು ಡಿಸಿಸಿ ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಹೆಚ್.ಎನ್.ಜಯದೇವರವರು, ಗಣಕೀಕೃತ ವ್ಯವಸ್ಥೆಯನ್ನು ಟಿ.ಎ.ಪಿ.ಸಿ.ಎಮ್.ಎಸ್. ಅಧ್ಯಕ್ಷ ಶ್ರೀ ನಾಗರಾಜ ಶೆಟ್ಟಿಯವರು ಉದ್ಘಾಟಿಸಿದರು. ಸಭೆಯಲ್ಲಿ ಶಾಸಕರಾದ ಶ್ರೀ ಕಿಮ್ಮನೆ ರತ್ನಾಕರ, ಎಮ್.ಪಿ.ಎಮ್.ಅಧ್ಯಕ್ಷರಾದ ಶ್ರೀ ಅರಗ ಜ್ಞಾನೇಂದ್ರ ಮುಂತಾದ ಗಣ್ಯರು ಉಪಸ್ಥಿತರಿದ್ದರು.

## ಬಿದರಳ್ಳಿ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ




ಕರ್ನಾಟಕ ಸರಕಾರದ ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಜಗದೀಶ ಶೆಟ್ಟರರವರು ಹುಬ್ಬಳ್ಳಿಯಲ್ಲಿ ದಿನಾಂಕ 17–12–2010 ರಂದು ಬಿದರಳ್ಳಿ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ ಮಾಡಿದರು.

## "ಇ–ಸ್ಟಾಂಪಿಂಗ" ವ್ಯವಹಾರ ಉದ್ಘಾಟನೆ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ದಿನಾಂಕ 15–1–2011 ರಂದು ತೀರ್ಥಹಳ್ಳಿಯ ಸರಸ್ವತಿ ಸೌಹಾರ್ದ ಸಹಕಾರಿಯಲ್ಲಿ ಇ–ಸ್ಟಾಂಪಿಂಗ ವ್ಯವಹಾರ ಉದ್ಘಾಟಿಸಿದರು. ಸಮಾರಂಭದಲ್ಲಿ ಶಾಸಕ ಶ್ರೀ ಕಿಮ್ಮನೆ ರತ್ನಾಕರ ಶಿವಮೊಗ್ಗ ಡಿ.ಸಿ.ಸಿ.ಬ್ಯಾಂಕಿನ ಉಪಾಧ್ಯಕ್ಷ ಶ್ರೀ ಹೆಚ್.ಎನ್.ಜಯದೇವ, ತೀರ್ಥಹಳ್ಳಿ ಟಿ.ಎ.ಪಿ.ಸಿ.ಎಮ್. ಎಸ್. ಅಧ್ಯಕ್ಷ ಶ್ರೀ ನಾಗರಾಜ ಶೆಟ್ಟಿ, ಸರಸ್ವತಿ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಬಾಳೆಬೈಲು ರಾಘವೇಂದ್ರ ಹಾಗು ವ್ಯವಸ್ಥಾಪಕ ನಿರ್ದೇಶಕ ಶ್ರೀ ಬಿ.ಎಸ್. ಅಚ್ಯುತನಾಯಕ ಹಾಗೂ ಸಹಕಾರಿಯ ನಿರ್ದೇಶಕರು ಸದಸ್ಯರು ಉಪಸ್ಥಿತರಿದ್ದರು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

# ನಿರ್ಮಾಣ ಭವನ ಆವರಣ,
ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು 560010

ದೂರವಾಣಿ ಸಂಖ್ಯೆಗಳು :

**23474408, 23573291** (ತಾತ್ಕಾಲಿಕ)

ಸಂಯುಕ್ತ ಸಹಕಾರಿಯ ನೂತನ ಕೇಂದ್ರ ಕಚೇರಿ ವಿಳಾಸ

# ಹಾಸನ, ಚಿಕ್ಕಮಗಳೂರು, ಬಾಗಲಕೋಟೆ, ಬಿಜಾಪೂರ, ಗುಲ್ಬರ್ಗಾ, ಯಾದಗೀರ, ಬೀದರ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೆಂಗಳೂರು ಗ್ರಾ., ರಾಮನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸಂಚಲನ ಮೂಡಿಸಿದ ಅವಲೋಕನಾ ಸಭೆಗಳು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಶಾಸನಬದ್ಧ ರಚನೆಗೊಂಡ ಸಂಸ್ಥೆಯಾಗಿದ್ದು ರಾಜ್ಯದ ಸೌಹಾರ್ದ ಸಹಕಾರಿಗಳ ಆರೋಗ್ಯಕರ ಬೆಳವಣಿಗೆಗಾಗಿ ಮಾರ್ಗದರ್ಶನ ಮಾಡುವ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳ ಪ್ರಗತಿಪರಿಶೀಲನೆ ಮಾಡಿ ಅಗತ್ಯ ಸಲಹೆ ಸೂಚನೆಗಳನ್ನು ನೀಡುವ ದೃಷ್ಟಿಯಿಂದ ಈ ಜನವರಿ 2011ರ ಮಾಹೆಯಲ್ಲಿ ಹಾಸನ, ಚಿಕ್ಕ ಮಗಳೂರು, ಬಾಗಲಕೋಟೆ, ಬಿಜಾಪೂರ, ಗುಲ್ಬರ್ಗಾ, ಯಾದಗೀರ್, ಬೀದರ್, ರಾಯಚೂರು, ಕೊಪ್ಪಳ, ಬೆಂಗಳೂರು ಗ್ರಾ., ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಅವಲೋಕನಾ ಸಭೆಗಳನ್ನು ನಡೆಸಿತು.

ದಿನಾಂಕ 18–1–2011ರಂದು ಹಾಸನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲ 9 ಸೌಹಾರ್ದ ಸಹಕಾರಿಗಳಿಂದ 26 ಪ್ರತಿನಿಧಿಗಳು ಭಾಗವಹಿಸಿದ್ದರು.ದಿನಾಂಕ 19–1–2011ರಂದು ಚಿಕ್ಕಮಗಳೂರಿನಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ 11 ಸೌಹಾರ್ದ ಸಹಕಾರಿಗಳ ವತಿಯಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು. ದಿನಾಂಕ 28–1–2011 ರಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಭೆಯು ಜಮಖಂಡಿಯಲ್ಲಿ ಹೋಟೆಲ್ ಅತಿಥಿಯಲ್ಲಿ ನಡೆಯಿತು. ಜಿಲ್ಲೆಯ 67 ಸೌಹಾರ್ದ ಸಹಕಾರಿಗಳ 100 ಪ್ರತಿನಿಧಿಗಳು ಭಾಗವಹಿಸಿದ್ದರು. ದಿನಾಂಕ 29–1–2011 ರಂದು ವಿಜಾಪೂರದ ಶ್ರೀ ಸಿದ್ದೇಶ್ವರ ದೇವಾಲಯದ ಹಿಂದಿನ ಶೇಫರ್ಡ್ ಹಾಲನಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ 87 ಸೌಹಾರ್ದ ಸಹಕಾರಿಗಳ ವತಿಯಿಂದ 115 ಪ್ರತಿನಿಧಿಗಳು ಭಾಗವಹಿಸಿದ್ದರು. ದಿನಾಂಕ 31–1–2011 ರಂದು ಗುಲ್ಬರ್ಗಾದ ಗುಡಲಕ್ ಹೋಟೆಲ್ ಸಭಾಂಗಣದಲ್ಲಿ ನಡೆದ ಅವಲೋಕನಾ ಸಭೆಯಲ್ಲಿ ಜಿಲ್ಲೆಯ 15 ಸೌಹಾರ್ದ ಸಹಕಾರಿಗಳ 40 ಪ್ರತಿನಿಧಿಗಳು ದಿನಾಂಕ : 8.2.2011ರಂದು ಬೆಂಗಳೂರು ಗ್ರಾ., ರಾಮನಗರ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ 14 ಸಹಕಾರಿಗಳ 22 ಸದಸ್ಯರು ಭಾಗವಹಿಸಿದ್ದರು.

ದಿನಾಂಕ 1–2–2011 ರಂದು ಬೀದರ್‌ನ ವಿಶ್ವಪತ್ತಿನ ಸೌಹಾರ್ದ ಸಹಕಾರಿಯಲ್ಲಿ ನಡೆದ ಸಭೆಯಲ್ಲಿ ಬೀದರ್ ಜಿಲ್ಲೆಯ 13 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು. ದಿನಾಂಕ 2–2–2011ರಂದು ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳ ಅವಲೋಕನಾ ಸಭೆಯನ್ನು ಸಿಂಧನೂರಿನಲ್ಲಿ ಸುಕೋ ಬ್ಯಾಂಕಿನ ಹೊಸ ಕಟ್ಟಡದಲ್ಲಿ ನಡೆಸಲಾಯಿತು. ಸಭೆಯಲ್ಲಿ ರಾಯಚೂರು ಜಿಲ್ಲೆಯ 32 ಸೌಹಾರ್ದ ಸಹಕಾರಿಗಳಿಂದ ಕೊಪ್ಪಳ ಜಿಲ್ಲೆಯ 29 ಸೌಹಾರ್ದ ಸಹಕಾರಿಗಳಿಂದ ಬಳ್ಳಾರಿ ಜಿಲ್ಲೆಯ 11 ಸೌಹಾರ್ದ ಸಹಕಾರಿಗಳಿಂದ ಒಟ್ಟು 72 ಸಹಕಾರಿಗಳ 140 ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರತಿ ಜಿಲ್ಲೆಯ ಅವಲೋಕನಾ ಸಭೆಗಳಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶಚಂದ್ರರವರು ಭಾಗವಹಿಸಿದ್ದರು.

ಹಾಸನ, ಚಿಕ್ಕಮಗಳೂರು ಬಾಗಲಕೋಟೆ ಗುಲ್ಬರ್ಗಾ ಹಾಗೂ ಬೀದರ ಜಿಲ್ಲೆಗಳಲ್ಲಿ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಚಿಕ್ಕಮಗಳೂರಿನಲ್ಲಿ ನಿರ್ದೇಶಕರಾದ ಶ್ರೀ ಎಸ್.ಎನ್.ವಿಶ್ವನಾಥ, ಬಾಗಲಕೋಟೆ ಯಲ್ಲಿ ನಿರ್ದೇಶಕರಾದ ಶ್ರೀ ಸಾಗರ ಜವಜರವರು ಬಿಜಾಪೂರದಲ್ಲಿ ನಿರ್ದೇಶಕರಾದ ಶ್ರೀ ವಿಠ್ಠಲಗೌಡ ಬಿರಾದಾರ ಗುಲ್ಬರ್ಗಾದಲ್ಲಿ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ ಸಿಂಧನೂರಿನಲ್ಲಿ ನಡೆದ ಸಭೆಯಲ್ಲಿ ನಿರ್ದೇಶಕರುಗಳಾದ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿ ಶ್ರೀ ವಿಶ್ವನಾಥ ಚ.ಹಿರೇಮಠ, ಶ್ರೀ ಮಂಜುನಾಥ ಸಿದ್ದಾಪೂರ ಹಾಗೂ ಶಾಸಕ ಶ್ರೀ ಪ್ರತಾಪ ಗೌಡ ಪಾಟೀಲರವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲರವರು ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮವನ್ನು ಶ್ರೀರಾವಸಾಹೇಬ ಪಾಟೀಲರವರು ಉದ್ಘಾಟಿಸಿದರು. ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರಿದ್ದರು. ಉಪಸ್ಥಿತರಿದ್ದು ಸಹಕಾರಿಗಳ ಕಾರ್ಯಚಟುವಟಿಕೆಗಳ ಅವಲೋಕನೆ ಮಾಡಿ ಸಮಸ್ಯೆಗಳ ಪರಿಹಾರಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸೂಕ್ತ ಸಲಹೆ ಹಾಗೂ ಮಾಗದರ್ಶನ ಮಾಡಿದರು.



ಬಾಗಲಕೋಟೆ ಅವಲೋಕನಾಸಭೆ ಉದ್ಘಾಟನೆ



ಬಿಜಾಪುರದಲ್ಲಿ ಅವಲೋಕನಾಸಭೆ ಉದ್ಘಾಟನೆ



ಗುಲ್ಬರ್ಗಾದಲ್ಲಿ

## ಗಣ್ಯರು ಹೇಳಿದ್ದು

"ಬದಲಾವಣೆ ಜಗದ ನಿಯಮ.
ಇದಕ್ಕೆ ಹೊಂದಿಕೊಳ್ಳಬೇಕು"
– ಸತೀಶಚಂದ್ರ, ಅಧ್ಯಕ್ಷರು.

"ಕಾನೂನು, ನಿಯಮ ಹಾಗೂ ಉಪವಿಧಿಗಳ
ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು"
– ಗುರುನಾಥ ಜ್ಯಾಂತಿಕರ, ಉಪಾಧ್ಯಕ್ಷರು.

# ಅವಲೋಕನಾ ಸಭೆಗಳಲ್ಲಿ ಪ್ರಗತಿ ಪರಿಶೀಲನೆಯ ಜೊತೆಯಲ್ಲಿ ಚರ್ಚೆಯಾಗಿರುವ ಹಾಗೂ ಪ್ರತಿನಿಧಿಗಳಿಂದ ವ್ಯಕ್ತವಾಗಿರುವ ಕೆಲವು ಮುಖ್ಯ ವಿಷಯಗಳು



ಬೀದರ್‌ನ ಅವಲೋಕನಾಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು



ಸಿಂಧನೂರಿನಲ್ಲಿ ನಡೆದ ಅವಲೋಕನಾಸಭೆ



ಬೆಂಗಳೂರಿನಲ್ಲಿ ಅವಲೋಕನಾಸಭೆ

"ಸವಾಲುಗಳನ್ನು ಸ್ವೀಕರಿಸಿ ಕಾರ್ಯನಿರ್ವಹಿಸಬೇಕು"
– ಮನೋಹರ ಮಸ್ಕಿ, ಎಂ.ಎಲ್.ಸಿ.,
ಸಂಸ್ಥಾಪಕ ಅಧ್ಯಕ್ಷರು

"ಆಧುನಿಕ ತಂತ್ರಜ್ಞಾನ ಅಳವಡಿಸುವುದು ಅಭಿವೃದ್ಧಿಗೆ ಪೂರಕ"
– ವಿಶ್ವನಾಥ ಹಿರೇಮಠ, ಮಾಜಿ ಅಧ್ಯಕ್ಷರು.

- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿ ಸದಸ್ಯತ್ವ ನೀಡುವಂತೆ ಅಗತ್ಯ ಕ್ರಮ ಬೇಕು.
- ದ್ರವ್ಯಾಸ್ತಿಗಳ ನಿರ್ವಹಣೆ ಸರಿಯಾಗಿ ಮಾಡದೆ ಇರುವುದು.
- ಸಾಲ ವಸೂಲಾತಿಗೆ ರಿಕವರಿ ಅಧಿಕಾರಿಗಳ ನೇಮಕಾತಿ ಅಗತ್ಯ.
- ದಾವಾ ದಾಖಲಾತಿ ಹಾಗೂ ಆದೇಶಗಳ ಜಾರಿ ಪ್ರಕ್ರಿಯೆ ವಿಳಂಬವಾಗುತ್ತಿದೆ ಈ ಬಗ್ಗೆ ಕ್ರಮ ಅಗತ್ಯ.
- ಬಡ್ಡಿಯೇತರ ಆದಾಯದ ಯೋಜನೆಗಳನ್ನು ನಮ್ಮ ಸಂಘಗಳಲ್ಲಿ ಅಳವಡಿಸಲು ಸಹಾಯವಾಗಿದೆ.
- ಬೇರೆ ಬೇರೆ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಅಧ್ಯಯನಕ್ಕೆ ಸಹಾಯವಾಗಿದೆ.
- ಥರ್ಡ ಪಾರ್ಟಿ ಚೆಕ್ ಕಲೆಕ್ಷನ್ಗೆ 50,000/– ರೂ. ಗಳ ವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನವರು ಅನುಮತಿಸಲು ಪ್ರಯತ್ನಿಸಿರುವುದು ಶ್ಲಾಘನೀಯ. ಆದರೆ ಈ ಮೊತ್ತವನ್ನು ಇನ್ನೂ ಹೆಚ್ಚಿಸಲು ಪ್ರಯತ್ನಿಸಬೇಕು.
- ಈ ಸ್ಟಾಂಪಿಂಗ್ ಕಮೀಶನ್ ಮೊತ್ತ ಹೆಚ್ಚಿಸಬೇಕು. ಆಗಿಂದಾಗ್ಗೆ ಉದ್ಭವಿಸುವ ಸಮಸ್ಯೆಗಳಿಗೆ ತುರ್ತು ಪರಿಹಾರದ ವ್ಯವಸ್ಥೆ ಅಗತ್ಯ.
- ಮುಂಬರುವ ದಿನಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ಮಾರಕವಾಗಲಿರುವ ಬರಲಿರುವ ಸೂಚಿತ "ನೇರ ತೆರಿಗೆ ವಿಧಾಯಕ" ದ ಬಗ್ಗೆ ಸಹಕಾರಿ ಸಂಸ್ಥೆಗಳಿಗೆ ತೊಂದರೆಯಾಗದಂತೆ ಅಗತ್ಯ ಕ್ರಮತೆಗೆದುಕೊಳ್ಳಬೇಕು.
- ತರಬೇತಿ ವ್ಯವಸ್ಥೆ ಸಾಲದು. ಕಾರ್ಯಕ್ರಮಗಳು ಹೆಚ್ಚಾಗಬೇಕು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಮತ್ತು ಸಹಕಾರಿಗಳ ಹಂತದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.
- ಈ ರೀತಿಯ ಸಭೆಗಳು ಅವಲೋಕನಾ ಸಭೆಗಳು ಪ್ರತಿ ತಾಲ್ಲೂಕಿನಲ್ಲೂ ನಡೆಯಬೇಕು. ಸೌಹಾರ್ದ ಸಹಕಾರಿಗಳಿಗೆ ಹೊಸ ಹುರುಪು ಬಂದಿದೆ. ಒಂದು ರೀತಿಯ ಸಂಚಲನ ಮೂಡಿದಂತಾಗಿದೆ.
- ಸಾಲ ನಿಯಮಾವಳಿಗಳು, ಠೇವಣಿ ನಿಯಮಗಳು ಹಾಗೂ ಸಿಬ್ಬಂದಿ ಸೇವಾ ನಿಯಮಗಳನ್ನು ರಚನೆಮಾಡಿ ಸರಬರಾಜು ಮಾಡಬೇಕು.
- ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ಮಾದರಿ ವೇತನ ಶ್ರೇಣಿಗಳನ್ನು ಸಂಯುಕ್ತ ಸಹಕಾರಿಯು ರಚಿಸಿ ಎಲ್ಲ ಸಹಕಾರಿಗಳಿಗೆ ಕಳುಹಿಸಬೇಕು.
- ವರ್ಷಕ್ಕೆ ಒಂದು ಬಾರಿಯಾದರೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಸೌಹಾರ್ದ ಸಹಕಾರಿಗಳಿಗೆ ಭೇಟಿಕೊಡುವ ವ್ಯವಸ್ಥೆಯಾಗಬೇಕು.
- ಸೌಹಾರ್ದ ಸಹಕಾರಿ ಕಾಯ್ದೆಯನ್ನು ಹಾಗೂ ಸಂಯುಕ್ತ ಸಹಕಾರಿಯ ಮಾರ್ಗ ಸೂಚಿಗಳನ್ನು ಪಾಲಿಸದೆ ತಮ್ಮ ಸ್ವಾಯತ್ತತೆಯನ್ನು ಸ್ವೇಛ್ಛಾಚಾರವನ್ನಾಗಿಸಿ ಕೊಂಡು ತಮ್ಮ ಮನಸ್ಸಿಗೆ ಬಂದಹಾಗೆ ಕಾರ್ಯ ನಿರ್ವಹಿಸುತ್ತಿರುವ ಕೆಲವೆ ಕೆಲವು ಸಹಕಾರಿ ಸಂಘ ಗಳಿಂದ ಇಡೀ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ ಇಂತಹ ಸೌಹಾರ್ದ ಸಹಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕು.

## "ಸೌಹಾರ್ದ ಸಹಕಾರಿ ದಿನಾಚರಣೆ"

# ಸಹಕಾರಿಗಳ ಸ್ಪಂದನ ಅತ್ಯಂತ ಹೆಮ್ಮೆಯ ಹಾಗೂ ಸಂತಸಕರ ವಿಚಾರ



ಬೆಳಗಾವಿಯ ವಿಭಾಗೀಯ ಕಛೇರಿ



ಹಸಿರು ಸೌಹಾರ್ದ ಸಹಕಾರಿ, ಶಿಗ್ಗಾವ್



ಸಪ್ತರ್ಷಿ ಸೌಹಾರ್ದ ಸಹಕಾರಿ, ಮೈಸೂರು.



ದ ಮರ್ಚೆಂಟ್ ಸೌಹಾರ್ದ ಸಹಕಾರ ಬ್ಯಾಂಕ್ ಚಿತ್ರದುರ್ಗ



ಕೊಡಗು ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಮಡಿಕೇರಿ



ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ್.



ಬೆಂಗಳೂರು ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಲಿ., ಬೆಂಗಳೂರು.



ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ, ಕಲ್ಲೋಳ.



ಆಟೋರಕ್ಷ ವಿವಿಧೋದ್ದೇಶ ಸಹಕಾರಿ, ಕೋಲಾರ.

ಆತ್ಮೀಯ ಸಹಕಾರಿ ಬಂಧುಗಳೆ,

ರಾಜ್ಯದಲ್ಲಿ 2011 ಜನೇವರಿ 1 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 10 ವರ್ಷಗಳಾಗಿದ್ದುದರ ಹಿನ್ನೆಲೆಯಲ್ಲಿ ದಶಮಾನೋತ್ಸವವನ್ನು ಆಚರಿಸುವ ಬಗ್ಗೆ ಮತ್ತು ಜನೇವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲು ಸಂಯುಕ್ತ ಸಹಕಾರಿಯು ಸೂಚನೆಗೆ ಎಲ್ಲ ಸಹಕಾರಿಗಳು ಸ್ಪಂದಿಸಿರುವುದು ಅತ್ಯಂತ ಹೆಮ್ಮೆಯ ಹಾಗೂ ಸಂತೋಷದ ವಿಷಯ. ಎಲ್ಲ ಸಹಕಾರಿಗಳ ಅಧ್ಯಕ್ಷರು ಪದಾಧಿಕಾರಿಗಳು ಅಧಿಕಾರಿಗಳ ಹಾಗು ಸಿಬ್ಬಂದಿಯವರು ಅತ್ಯಂತ ಸಂತೋಷದಿಂದ ಹಾಗು ಉತ್ಸಾಹದಿಂದ ಈ ದಿನವನ್ನು ಆಚರಿಸಿದ ಬಗ್ಗೆ ಬಹಳಷ್ಟು ವರದಿಗಳು ಬಂದಿವೆ. ಧ್ವಜಾರೋಹಣ ಮಾಡಿ ಸದಸ್ಯರಿಗೆ ಸಿಹಿ ಹಂಚುವುದು, ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಚಾರ ಮಾಡುವುದು, ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಉಚಿತ ಕಣ್ಣಿನ ತಪಾಸಣೆ ಹಾಗು ಶಸ್ತ್ರಚಿಕಿತ್ಸೆ ನಡೆಸುವುದು, ಸದಸ್ಯರಿಂದ ಠೇವಣಿ ಸಂಗ್ರಹಿಸುವುದು, ಸಾಲ ವಿತರಿಸುವುದು ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಪ್ರಬಂಧ ಸ್ಪರ್ಧೆ ಹಾಗು ಚರ್ಚಾಗೋಷ್ಠಿಗಳನ್ನು ಏರ್ಪಡಿಸಿ ಬಹುಮಾನ ವಿತರಿಸುವುದು, ಹಿರಿಯ ಸದಸ್ಯರಿಗೆ ಗೌರವಿಸುವುದು, ಕರ ಪತ್ರಗಳನ್ನು ವಿತರಿಸುವುದು, ಶಾಲಾ ಮಕ್ಕಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಾವುಗಳೆಲ್ಲ ವೈಶಿಷ್ಟ್ಯಪೂರ್ಣವಾಗಿ ಪರಿಣಾಮಕಾರಿಯಾಗಿ ಆಚರಿಸಿದ ಬಗ್ಗೆ ತಮ್ಮ ವರದಿಯನ್ನು ಗಮನಿಸಿದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ತಾವೆಲ್ಲ ಬದ್ಧತೆಯುಳ್ಳವರು ಎಂಬುವುದು ಮತ್ತೊಮ್ಮೆ ದೃಢಪಡುತ್ತದೆ. ತಮಗೆಲ್ಲರಿಗೂ ಅಭಿನಂದನೆಗಳು. ಇದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ.

ಬಂದಿರುವ ವರದಿಗಳ ಸಂಖ್ಯೆ ನಿರೀಕ್ಷೆಗೂ ಮೀರಿದೆ. ಎಲ್ಲವುಗಳನ್ನು ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಸಹಕರಿಸಲು ಕೋರಿದೆ.

– ಸಂಪಾದಕರು




ಶ್ರೀರಾಮ ಸೌಹಾರ್ದ ಪತ್ತಿನ ಸಹಕಾರಿ ನಿ., ತೇರದಾಳ



ಶ್ರೀ ಬೀರಲಿಂಗೇಶ್ವರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಉಪ್ಪಿನೆಸಿ.



ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ದೂಪದಾಳ, ಘಟಪ್ರಭ.



ಶ್ರೀ ವರ್ಧಮಾನ ಕ್ರೆಡಿಟ್ ಅರ್ಬನ್ ಸೌಹಾರ್ದ ಸಹಕಾರಿ ನಿ., ಕುಡಚಿ, ರಾಯಬಾಗ್



ಆಳ್ನಾವರ ಮಿಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ,



ಹೋಟೇಲ್ ಮಾಲೀಕರ ಪತ್ತಿನ ಸಹಕಾರಿ ನಿ., ಹುಮ



ಕೆನ್ನಾಮೆಟಲ್ ಇಂಡಿಯಾ ಎಂಪ್ಲಾಯೀಸ್ ಸೌಹಾರ್ದ ಕ್ರೆಡಿಟ್ ಕೋಆ



ದ ಗಂಗಾವತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂ



ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಗು

# ಸಹಕಾರ ಸಂಸ್ಥೆಗಳಿಗೆ "ನೇರ ತೆರಿಗೆ ವ್ಯವಸ್ಥೆ" ಕಾಯ್ದೆ ಸಾಧಕ ಬಾಧಕಗಳ ಕುರಿತು ಕಾರ್ಯಾಗಾರ

## ಪ್ರಧಾನ ಮಂತ್ರಿ ಹಾಗೂ ಹಣಕಾಸು ಮಂತ್ರಿಗಳಿಗೆ ಸಹಕಾರಿಗಳ ಮನವಿ ಸಲ್ಲಿಸಲು ಸಿದ್ಧತೆ



ಮುಂಬರುವ ಸಾಲಿನಿಂದ ಜಾರಿಗೆ ಬರಲಿರುವ ಸಹಕಾರ ಸಂಸ್ಥೆಗಳಿಗೆ "ನೇರ ತೆರಿಗೆ ವ್ಯವಸ್ಥೆ" ಕಾಯ್ದೆ ಕುರಿತು ಕಾರ್ಯಾಗಾರವು ಸಹಕಾರ ಭಾರತಿ ಕರ್ನಾಟಕ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮವನ್ನು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆ ಯವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ರವರು ವಹಿಸಿದ್ದರು.

ಪ್ರಾರಂಭದಲ್ಲಿ ಸಹಕಾರ ಭಾರತೀಯ ರಾಷ್ಟ್ರೀಯ ಉಪಾಧ್ಯಕ್ಷ ಶ್ರೀ ಕೊಂಕೋಡಿ ಪದ್ಮನಾಭರವರು ಪ್ರಾಸ್ತಾವಿಕವಾಗಿ ಮಾತನಾಡಿ ಮುಂಬರುವ ದಿನಗಳಲ್ಲಿ ಸಹಕಾರಿ ಸಂಸ್ಥೆಗಳ ಮೇಲೆ "ನೇರ ತೆರಿಗೆ ವ್ಯವಸ್ಥೆ" ಎಂಬ ಗದಾಪ್ರಹಾರವಾಗಲಿದೆ. ಈ ತೆರಿಗೆ ವ್ಯವಸ್ಥೆಯು ಸಹಕಾರ ಸಂಸ್ಥೆಗಳ ಅಭಿವೃದ್ಧಿಗೆ ಮಾರಕವಾಗಲಿದ್ದು ಇದನ್ನು ತಡೆಯಲು ಸಹಕಾರಿಗಳ ಸಾಮೂಹಿಕ ಪ್ರತಿಭಟನೆ ಹಾಗೂ ಹೋರಾಟಗಳ ಅಗತ್ಯವಿದೆ. ಹೀಗಾಗಿ ಸಹಕಾರ ಭಾರತಿ ದೇಶಾದ್ಯಂತ ಈ ಹೋರಾಟವನ್ನು ಕೈಗೆತ್ತಿಕೊಂಡಿರುತ್ತದೆ. ಈ ತೆರಿಗೆ ಪದ್ಧತಿಯ ಬಗ್ಗೆ ದೇಶಾದ್ಯಂತ ಸಹಕಾರಿಗಳಲ್ಲಿ ಅರಿವು ಹಾಗೂ ಜಾಗೃತಿ ಮೂಡಿಸುವ ಕಾರ್ಯ ಇದಾಗಿದೆ ಇದಕ್ಕೆ ಎಲ್ಲ ಸಹಕಾರಿಗಳು ಸಹಕರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀಎನ್.ಶ್ರೀನಿವಾಸಮೂರ್ತಿ ಸಹಕಾರ ಭಾರತಿಯ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ರಮೇಶ ವೈದ್ಯ ಚಾರ್ಟರ್ಡ ಅಕೌಂಟೆಂಟರುಗಳಾದ ಶ್ರೀ ರಾಮಚಂದ್ರರಾವ್, ಬಿ.ವಿ.ರವೀಂದ್ರನಾಥ, ಶ್ರೀ ಮಧುಕರ ಹೆಗಡೆ ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ಎಮ್.ಜಿ.ಪಾಟೀಲ ಅನೇಕ ಸಹಕಾರಿ ಗಣ್ಯರು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಮುಂತಾದವರು ಭಾಗವಹಿಸಿದ್ದರು.

ಕೇಂದ್ರ ಸರಕಾರದ ಉದ್ದೇಶಿತ "ನೇರ ತೆರಿಗೆ ಕಾಯ್ದೆ" ಯಡಿಯಲ್ಲಿ "80 ಪಿ." ವಿನಾಯಿತಿಗಳು ಸೌಲಭ್ಯಗಳು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಹಾಗೂ ಪೀಕಾರ್ಡ ಬ್ಯಾಂಕುಗಳನ್ನು ಹೊರತುಪಡಿಸಿ ಬೇರೆ ಸಹಕಾರಿ ಸಂಸ್ಥೆಗಳಿಗೆ ಇರುವುದಿಲ್ಲ. ಎಲ್ಲ ಸಹಕಾರಿ ಸಂಸ್ಥೆಗಳಿಗೆ ಈ ವಿನಾಯಿತಿ ಸೌಲಭ್ಯ ವಿಸ್ತರಿಸಬೇಕು ಎಂಬುದು ನಮ್ಮ ಮನವಿಯಾಗಿದೆ.

"80. ಪೀ" ವಿನಾಯಿತಿಗಳಲ್ಲಿ ಕೆಲವು ಸೌಲಭ್ಯಗಳನ್ನು ಗಣನೀಯವಾಗಿ ಕಡಿಮೆ ಮಾಡಲಾಗಿರುವುದನ್ನು ಹಾಗೂ ಕೆಲವುಗಳನ್ನು ಹೊಸದಾಗಿ ಕಲಮು 85, 86 ಕಲಮುಗಳಲ್ಲಿ ನೇರ ತೆರಿಗೆ ವಿಧೇಯಕದ 6 ನೇ ಸೆಡ್ಯೂಲನಲ್ಲಿ 47 ವಿಷಯವನ್ನಾಗಿ ಸೇರಿಸಲಾಗಿದೆ. ಮತ್ತು ನೇರ ತೆರಿಗೆ ವಿನಾಯಿತಿ ನೀಡುವ ಯುಕ್ತಾ ಯುಕ್ತ ವಿವೇಚನೆಯ ಅಧಿಕಾರವನ್ನು ಕೈ ಬಿಟ್ಟು ಅವುಗಳನ್ನು ಕಂಡಿಕೆ 85,86 ರಲ್ಲಿಯೆ ಅಳವಡಿಸಬೇಕು

ಸೆಡ್ಯೂಲ್ ಬ್ಯಾಂಕಗಳಲ್ಲಿ ಸಹಕಾರ ಸಂಸ್ಥೆಗಳ ಹೂಡಿಕೆಗಳಿಗೆ ಬೇರೆ ಬ್ಯಾಂಕುಗಳಿಗೆ ಟಿ.ಡಿ.ಎಸ್.ನಲ್ಲಿ ವಿನಾಯಿತಿ ಇರುವಂತೆ ಸಹಕಾರ ಸಂಸ್ಥೆಗಳಿಗೂ ಇರಬೇಕು. 269ಎಸ್ಎಸ್ ಹಾಗೂ 269 ಟಿ ಇವುಗಳು ಠೇವಣಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ಈ ವಿನಾಯಿತಿ ಎಲ್ಲ ಸಹಕಾರಿ ಸಂಸ್ಥೆಗಳಿಗೂ ಅನ್ವಯಿಸಬೇಕು ಹಾಗೂ ಈ ಮೊತ್ತ ರೂ. 20,000 ರಿಂದ ರೂ. 50,000 ಕ್ಕೆ ಹೆಚ್ಚಿಸಬೇಕು. ಈ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ, ಅರ್ಥಸಚಿವರಿಗೆ, ಯೋಜನಾ ಆಯೋಗದ ಅಧ್ಯಕ್ಷರಿಗೆ, ಪಾರ್ಲಿಮೆಂಟಿನ ಸ್ಟಾಂಡಿಂಗ ಕಮೀಟಿಯ ಅಧ್ಯಕ್ಷರಿಗೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

## ಸಹಕಾರಿಗಳಿಗೆ ಭೇಟಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀಎಸ್.ಆರ್.ಸತೀಶಚಂದ್ರ ಹಾಗೂ ಉಪಾಧ್ಯಕ್ಷ ಶ್ರಿ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ ರವರು ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ. ನೀಡಿದರು.

ಬೆಳಗಾವಿಯ ಆದಿನಾಥ ಸೌಹಾರ್ದ ಸಹಕಾರಿ, ಬೈಲಹೊಂಗಲ ತಾಲ್ಲೂಕಿನ ರಾಣಿಚೆನ್ನಮ್ಮ ಸೌಹಾರ್ದ ಸಹಕಾರಿ ತೇರದಾಳ ಪತ್ತಿನ ಸೌಹಾರ್ದ ಸಹಕಾರಿ, ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಹುನ್ನೂರು ಸೌಹಾರ್ದ ಪತ್ತಿನ ಸಹಕಾರಿ ನಿ ಜಮಖಂಡಿ, ಬಿಜಾಪೂರದಲ್ಲಿ ಸಿದ್ಧಸಿರಿ ಸೌಹಾರ್ದ ಸಹಕಾರಿ, ಬಸವಸಿರಿ ಸೌಹಾರ್ದ ಸಹಕಾರಿ, ತೋಟಗಾರಿಕಾ ಸೌಹಾರ್ದ ಸಹಕಾರಿ, ಆದರ್ಶ ಸೌಹಾರ್ದ ಸಹಕಾರಿ, ಆದರ್ಶ ಪತ್ತಿನ ಸಹಕಾರಿ ಸಂಘ, ಸಿಂದಗಿಯಲ್ಲಿ ಶ್ರೀ ಗಜಾನನ ಸೌಹಾರ್ದ ಸಹಕಾರಿ, ಗುಲ್ಬರ್ಗಾದಲ್ಲಿ ಶ್ರೀ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ, ಶ್ರೀರಕ್ಷಾ ಸೌಹಾರ್ದ ಸಹಕಾರಿ, ನಮ್ಮ ಸೌಹಾರ್ದ ಸಹಕಾರಿ, ಶ್ರೀ ಲಕ್ಷ್ಮಿ ವಿಕಾಸ ಸೌಹಾರ್ದ ಸಹಕಾರಿ ತಡಕಲ್, ಶ್ರೀ ಲಕ್ಷ್ಮೀ ಸೌಹಾರ್ದ ಸಹಕಾರಿ, ಮಹಿಳಾ ಸೌಹಾರ್ದ ಸಹಕಾರಿ, ಪಂಡಿತ ದೀನದಯಾಳ್ ಉಪಾಧ್ಯಾಯ ಸೌಹಾರ್ದ ಸಹಕಾರಿ, ಹುಮ್ನಾಬಾದ್. ಬೀದರನಲ್ಲಿ ಜನಸೇವಾ ಸೌಹಾರ್ದ ಸಹಕಾರಿ, ಕಲ್ಯಾನ ಪತ್ತಿನ ಸೌಹಾರ್ದ ಸಹಕಾರಿ, ವಿಶ್ವಪತ್ತಿನ ಸೌಹಾರ್ದ ಸಹಕಾರಿ ಸಿಂಧನೂರಿನಲ್ಲಿ ಜನತಾ ಪತ್ತಿನ ಸೌಹಾರ್ದ ಸಹಕಾರಿ, ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ ಶಾಖೆ, ಸುಕೋ ಬ್ಯಾಂಕ ಶಾಖೆ, ಶ್ರೀ ಭ್ರಮರಾಂಬ ಸೌಹಾರ್ದ ಸಹಕಾರಿ ಮಸ್ಕಿ, ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿ., ಗಂಗಾವತಿ, ಲಕ್ಷ್ಮೀ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಹರಿಹರ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹೊಸಹಳ್ಳಿಯ ಧರ್ಮನ್ಯಾಸ ಸೌಹಾರ್ದ ಸಹಕಾರಿ ನಿ., ಹೀಗೆ ಇನ್ನು ಕೆಲವು ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಿ ಕಾರ್ಯ ಚಟುವಟಿಕೆಗಳನ್ನು ಪರೀಶೀಲಿಸಿ ಅಭಿವೃದ್ಧಿಗೆ ಅನೇಕ ಸಲಹೆ ಸೂಚನೆಗಳನ್ನು ನೀಡಲಾಯಿತು.




ಪಂಡಿತ ದೀನದಯಾಳ ಉಪಾಧ್ಯಾಯ ಸೌಹಾರ್ದ ಸಹಕಾರಿ ನಿ., ಹುಮ್ನಾಬಾದ್‌ನಲ್ಲಿ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪ ರವರಿಂದ ನೂತನವರ್ಷ 2011ರ ಕ್ಯಾಲೆಂಡರ್ ಬಿಡುಗಡೆ



ಕೊಪ್ಪದ ಸ್ನೇಹ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ.,ದಲ್ಲಿ ಅಡಿಕೆ ಸುಲಿಯುವ ಯಂತ್ರಗಳ ಪ್ರಾತ್ಯಕ್ಷಿಕೆಯನ್ನು ಗ್ರಾಮದ ಕೃಷಿಕರಿಗಾಗಿ ಏರ್ಪಡಿಸಲಾಗಿತ್ತು.



ಬೀದರ್‌ನ ವಿಶ್ವ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ವಿವಿಧ ಯೋಜನೆಗಳ ಉದ್ಘಾಟನೆ.



ಎಮ್.ಎಸ್. ಅಶ್ವತ್ಥನಾರಾಯಣ, ನಿವೃತ್ತ ಅಪರ ನಿಬಂಧಕರು, ಸಹಕಾರ ಇಲಾಖೆ.

# ಸಹಕಾರಿ ಸಂಸ್ಥೆಗಳಲ್ಲಿ ಆಯವ್ಯಯ

...ಹಿಂದಿನ ಸಂಚಿಕೆಯಿಂದ

ಹಾಗಾದರೆ ಸೂಕ್ತವಾದ ಆಯವ್ಯಯ ಎಂದರೇನು? ಒಂದು ಸಂಸ್ಥೆಯ (ಅಥವಾ ವ್ಯಕ್ತಿಯ) ವಾರ್ಷಿಕ ಆದಾಯ ವೆಚ್ಚಗಳ ಅಂದಾಜು (estimates) ಇದನ್ನೇ ಸಾಧಾರಣವಾಗಿ ಆಯವ್ಯಯ ಎಂದು ಹೇಳಲಾಗುತ್ತಿದೆ. ಹಿಂದೆ ತಿಳಿಸಿದ ಬಜೆಟ್ ಪದದ ಇತಿಹಾಸದ ಹಿನ್ನಲೆಯಲ್ಲಿ ಸರ್ಕಾರದ ಆಯವ್ಯಯ ಪಟ್ಟಿಯೇ ತಕ್ಷಣ ಎಲ್ಲರ ಮನಸ್ಸಿಗೂ ಬರುತ್ತದೆ, ಆದರೆ ಈ ಹಿಂದೆ ವಿವರಿಸಿದಂತೆ ಸಹಕಾರ ಸಂಸ್ಥೆಗಳಲ್ಲೂ ಈ ಪದ ಇದೇ ಅರ್ಥದಲ್ಲಿ ಬಳಸಲಾಗುತ್ತಿದೆ. ನಮ್ಮ ಸಂಸ್ಥೆಗಳಲ್ಲಿ ಆಯವ್ಯಯ ತಯಾರಿಸುವಾಗ ಸಾಧಾರಣವಾಗಿ ಕೆಳಕಂಡ ವಿಷಯಗಳನ್ನು ಪರಿಗಣಿಸುತ್ತಾರೆ. ಆಯ ಅಥವಾ ಸಂಸ್ಥೆಗೆ ಬರತಕ್ಕಂತಹ ಹಣ ಎಂದು, ಹೂಡಿಕೆಗಳ ಮೇಲಿನ ಬಡ್ಡಿ, ನೀಡಿದ ಸಾಲಗಳ ಮೇಲೆ ವಸೂಲಾಗಬಹುದಾದ ಬಡ್ಡಿ, ವ್ಯಾಪಾರ ವಹಿವಾಟಿನಿಂದ ಬರುವ ಆದಾಯಗಳು ಮುಂತಾದವು ಸೇರುತ್ತಿವೆ. ಹೂಡಿಕೆಗಳ ಮೇಲೆ ಬರುವ ಬಡ್ಡಿ ನಿಶ್ಚಿತವಾದ ಮತ್ತು ಖಚಿತವಾಗಿ ಬರಬಹುದಾದಂತಹ ಹಣವಾಗಿದ್ದು ಇದನ್ನು ಹೆಚ್ಚು ವ್ಯತ್ಯಾಸವಿಲ್ಲದಂತೆ ಲೆಕ್ಕಿಸಬಹುದು. ಆದರೆ ಸಾಲಗಳ ಮೇಲಿನ ಬಡ್ಡಿ ಸಾಲ ಮರುಪಾವತಿ ಅಥವಾ ವಸೂಲಾತಿಯನ್ನು ಅವಲಂಬಿಸಿದ್ದು ಸಂಸ್ಥೆಯಿಂದ ಸಾಲಪಡೆದವರ ಮನೋಭಾವ, ಅವರ ಆರ್ಥಿಕ ಸ್ಥಿತಿ ಮುಂತಾದವನ್ನು ಗಮನಿಸಿ ಅಂದಾಜಿಸಬೇಕಾಗುತ್ತದೆ. ಒಳ್ಳೆಯ ಸಾಲ ವಸೂಲಾತಿ ಇತಿಹಾಸವಿರುವ ಸಂಸ್ಥೆಗಳಲ್ಲಿ ಇದೇನೂ ದೊಡ್ಡ ವ್ಯತ್ಯಾಸವಾಗುವುದಿಲ್ಲ. ಆದರೆ ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳಂತಹವುಗಳಲ್ಲಿ ಈ ಕೆಲಸ ತುಂಬಾ ವಸೂಲಾತಿ ಕಡಿಮೆ ಇರುವುದು ಮಾತ್ರವಲ್ಲದೆ ಪ್ರಕೃತಿ ವೈಪರೀತ್ಯಗಳು, ಮಾರುಕಟ್ಟೆ ಏಳುಬೀಳುಗಳು, ಸರ್ಕಾರದ ಕಾರ್ಯನೀತಿಗಳು, ರಾಜಕೀಯ ವಾತಾವರಣಗಳು ಮುಂತಾದ ಅನೇಕ ಸಂಗತಿಗಳು ಈ ಕ್ಷೇತ್ರದಲ್ಲಿ ಸಾಲ ವಸೂಲಾತಿ ವಿಷಯಗಳಲ್ಲಿ ಅತ್ಯಂತ ಏರುಪೇರುಗಳನ್ನು ಉಂಟುಮಾಡಿ ಪರಿಸ್ಥಿತಿಯನ್ನು ಗೋಜಲಾಗಿಸಿವೆ. ಆದರೆ ಸೌಹಾರ್ದ ಸಹಕಾರಿಗಳಿಗೆ ಇಂತಹ ಆತಂಕದ ಪರಿಸ್ಥಿತಿ ಇಲ್ಲ. ಇವುಗಳಲ್ಲಿ ಬಹುತೇಕ ಸಹಕಾರಿಗಳು ನಗರ ಪ್ರದೇಶಗಳಲ್ಲಿಯೇ ಇರುವುದರಿಂದ ಸಾಲದ ಮರುಪಾವತಿ ಪರಿಸ್ಥಿತಿ ಉತ್ತಮವಾಗಿರುತ್ತದೆ. ಆದ್ದರಿಂದ, ಸಾಲದ ಮೇಲಿನ ಬಡ್ಡಿಯ ಆದಾಯವನ್ನು ಅವು ಸರಿಯಾಗಿಯೇ ಅಂದಾಜಿಸಲು ಸಾಧ್ಯವಿರುತ್ತದೆ. ವ್ಯಾಪಾರ ವಹಿವಾಟಿನಿಂದ ಬರುವ ಆದಾಯಗಳನ್ನು ಸಹ ಅಂದಾಜಿಸುವುದು ಸುಲಭವೇನಲ್ಲ.

ಸಂಘವು ನಡೆಸುವ ವ್ಯಾಪಾರದ ಗಾತ್ರ, ಅವು ಇಟ್ಟುಕೊಳ್ಳುವ ಮಾರಾಟದ ಬೆಲೆ ಮುಂತಾದುವನ್ನು ಗಮನಿಸಿ ಇದನ್ನು ಅಂದಾಜಿಸ ಬೇಕಾಗುತ್ತದೆ ಇದಕ್ಕಾಗಿ ಒಂದು ಪ್ರತ್ಯೇಕ ವ್ಯಾಪಾರ ತಃಖ್ತೆಯಲ್ಲಿ ವಸ್ತುಗಳ ಕೊಳ್ಳುವ ಬೆಲೆ, ಸಾಗಾಣಿಕೆ ವೆಚ್ಚ ಇತ್ಯಾದಿ ಎಲ್ಲವನ್ನು ಅಂದಾಜಿಸಿ ಮಾರಾಟದ ಗಾತ್ರದ ಆಧಾರದ ಮೇಲೆ ಬರುವ ಹಣವನ್ನು ಅಂದಾಜಿಸಿ ಒಟ್ಟಾರೆ ವ್ಯಾಪಾರೀ ಲಾಭ ಎಂದು ಲೆಕ್ಕ ಮಾಡುವ ಪದ್ಧತಿಯನ್ನು ಸಹ ಮಾಡಬಹುದು. ಈ ವ್ಯಾಪಾರಿ ಲಾಭವನ್ನು ಆಯವ್ಯಯ ಅಂದಾಜಿನಲ್ಲಿ ಆದಾಯಕ್ಕೆ ಸೇರಿಸಿಕೊಳ್ಳಬಹುದು. ಖರ್ಚಿನ ಬಾಬತ್ತುಗಳಲ್ಲಿ ಮೊದಲಿನಿಂದಲೂ ಪರಿಚಿತವಾಗಿರುವ ಅಂಶಗಳೇ ಬಹಳ ಇವೆ. ಸಿಬ್ಬಂದಿ ಖರ್ಚು, ತೆರಿಗೆಗಳು, ಬಾಡಿಗೆ, ವಿದ್ಯುತ್, ಅಂಚೆ, ದೂರವಾಣಿ, ಸಭೆಗಳ ಖರ್ಚು ಇತ್ಯಾದಿಯಾಗಿ ಗಣನೆಗೆ ತೆಗೆದುಕೊಳ್ಳುವುದು ಈಗಾಗಲೇ ಎಲ್ಲರಿಗೂ ತಿಳಿದ ವಿಷಯವೆ ಆಗಿದೆ. ಈ ಅಂಶಗಳು ಮತ್ತು ಪಡೆದ ಸಾಲಗಳ ಮೇಲೆ ನೀಡಬೇಕಾದ ಬಡ್ಡಿಯನ್ನು ಸಹ ಸರಿಯಾಗಿಯೇ ಅಂದಾಜಿಸುವುದು ಸಾಧ್ಯವಿದೆ. ಪ್ರತ್ಯೇಕ ವ್ಯಾಪಾರಿ ತಃಖ್ತೆಯನ್ನು ತಯಾರಿಸಿಬಿಟ್ಟು ವ್ಯಾಪಾರಿ ಲಾಭವನ್ನು ಮಾತ್ರ ಆಯವ್ಯಯ ಅಂದಾಜಿಗೆ ತೆಗೆದುಕೊಂಡಿದ್ದರಂತೂ ಆಯವ್ಯಯ ಅಂದಾಜು ಸರಳವಾಗಿಯೇ ಕಾಣುತ್ತಿರುತ್ತದೆ.

ಆದರೆ ಇಷ್ಟೆಲ್ಲ ಮಾಡಬೇಕಾದರೆ ಇನ್ನೊಂದು ಮುಖ್ಯವಾದ ಕೆಲಸವನ್ನು ಮಾಡಿರಬೇಕಾಗಿರುತ್ತದೆ ಎಂಬುದನ್ನು ಈಗಾಗಲೇ ಓದುಗರು ಗಮನಿಸಿರಬಹುದು. ಅದೆಂದರೆ ವಾರ್ಷಿಕ ಯೋಜನೆಯ ತಯಾರಿಕೆ. ವಾರ್ಷಿಕ ಮಹಾಸಭೆಗೆ ನಿಗದಿಪಡಿಸಿರುವ ಕರ್ತವ್ಯಗಳನ್ನು (ಸೌಹಾರ್ದ ಕಾಯಿದೆಯ ಸೆಕ್ಷನ್ 23ಜಿ ಮತ್ತು 23ಹೆಚ್ ಹಾಗೂ ಮೂಲ ಕಾಯಿದೆಯ ಸೆ27ಜಿ ಮತ್ತು ಸೆ27ಹೆಚ್) ಗಮನಿಸಿದರೆ ವಾರ್ಷಿಕ ಆಯವ್ಯಯದ ಅನುಮೋದನೆಗೂ ಮುಂಚೆ ವಾರ್ಷಿಕ ಯೋಜನೆಯನ್ನು ಕಾಯಿದೆಯಲ್ಲಿ ಕೊಟ್ಟಿದ್ದಾರೆ. ಎಷ್ಟು ಬಡ್ಡಿ ಆದಾಯವಾಗಿ ಬರುತ್ತದೆ ಎಂದು ತಿಳಿಸುವುದಕ್ಕಿಂತ ಮೊದಲು ಎಷ್ಟು ಸಾಲ ನೀಡುತ್ತೇವೆ ಎಂಬ ಬಗ್ಗೆ ಯೋಜನೆ ಮಾಡಬೇಕು. ಆದ್ದರಿಂದ ವಾರ್ಷಿಕ ಆಯವ್ಯಯ ಅಂದಾಜು ತಯಾರಿಕೆಗೂ ಮೊದಲು ವಾರ್ಷಿಕ ಯೋಜನೆಯ ತಯಾರಿ ಅವಶ್ಯ. ಇದನ್ನು ಮಾಡುವಾಗ, ಸೌಹಾರ್ದ ಸಹಕಾರಿಗಳಂತಹ ಸಂಸ್ಥೆಗಳಲ್ಲಿ, ಎಂದರೆ ಪ್ರಮುಖವಾಗಿ ಸಾಲ ನೀಡಿಕೆ ಸಂಸ್ಥೆಗಳಲ್ಲಿ ಮುಂಬರುವ ದಿನಗಳಲ್ಲಿ ಎಷ್ಟು ಸಾಲ ನೀಡಬಹುದಾಗಿದೆ, ಈ ಸಾಲ ನೀಡಲು ಲಭ್ಯವಿರುವ ಆಂತರಿಕ ಸಂಪನ್ಮೂಲಗಳೆಷ್ಟು ಹೊರಗಿನಿಂದ ತರಬೇಕಾದ ಸಾಲದ ಪ್ರಮಾಣವೇನು, ಯಾವ ತರಹದ ಸಾಲವನ್ನು ಯಾವ ರೀತಿಯ ಸದಸ್ಯರಿಗೆ ನೀಡಬೇಕು, ಶೇ 100 ರಷ್ಟು ವಸೂಲಾತಿ ಆಗುವ ಸಾಧ್ಯತೆಗಳೇನು, ಇಷ್ಟೆಲ್ಲ ಗಾತ್ರದ ವ್ಯವಹಾರ ನಡೆಸಲು ಅಗತ್ಯವಾದ ಸಿಬ್ಬಂದಿ ಬಲ ಹಾಗೂ ಮೂಲಸೌಕರ್ಯದ ಲಭ್ಯತೆ ಏನು, ಇತ್ಯಾದಿಗಳನ್ನು ಆದಷ್ಟು ಕರಾರುವಾಕ್ಕಾಗಿ ಅಂದಾಜಿಸಿ ಅದನ್ನು ವ್ಯವಸ್ಥಿತವಾಗಿ ರೂಪದಲ್ಲಿ ದಾಖಲಿಸುವದೇ ವಾರ್ಷಿಕ ಯೋಜನೆ. ಆದರೆ ಈ ವಾರ್ಷಿಕಯೋಜನೆ ಇದ್ದಕ್ಕಿದ್ದ ಹಾಗೆ ಹಿಂದು ಮುಂದಿಲ್ಲದೆ ಅವತರಿಸುವುದಿಲ್ಲ, ಇದು ಸಂಸ್ಥೆಯ ಹಿಂದಿನ ವರ್ಷಗಳ ಸಾಧನೆ ಮತ್ತು ಅದರ ಇಂದಿನ ಶಕ್ತಿ ಸಾಮರ್ಥ್ಯ ಇವುಗಳನ್ನು ಅವಲಂಬಿಸುತ್ತದೆ, ಶಕ್ತಿ ಸಾಮರ್ಥ್ಯ ಎಂದಾಗ ಸಿಬ್ಬಂದಿಗಳ ಕಾರ್ಯದಕ್ಷತೆ, ಆಡಳಿತ ವರ್ಗದವರ ಬದ್ಧತೆ ಮತ್ತು ದೂರದರ್ಶಿತ್ವ ಇತ್ಯಾದಿಗಳು ಪ್ರಮುಖ ಪಾತ್ರ ವಹಿಸುತ್ತವೆ. ಆದ್ದರಿಂದಲೇ ಸಂಸ್ಥೆಗಳ ಆರ್ಥಿಕ ಬೆಳವಣಿಗೆಗೆ ದೀರ್ಘಾವಧಿ, ಮಧ್ಯಮಾವಧಿ ಮತ್ತು ವಾರ್ಷಿಕ ಯೋಜನೆಗಳನ್ನು ರೂಪಿಸುವ ಅಗತ್ಯ ಇದೆಯೆಂದು ಹೇಳುವುದು. ದೀರ್ಘಾವಧಿ ಯೋಜನೆಯಲ್ಲಿ 5 ರಿಂದ 10 ವರ್ಷಗಳವರೆಗಿನ ಬೆಳವಣಿಗೆಯ ರೂಪ ರೇಷೆಗಳನ್ನು ಅಂದಾಜನ್ನು ಲೆಕ್ಕಿಸುವುದು, ಮಧ್ಯಮಾವಧಿ ಯೋಜನೆಯಲ್ಲಿ 3 ರಿಂದ 5 ವರ್ಷಗಳ ಚಟುವಟಿಕೆಗಳ ಗಾತ್ರ ಮತ್ತು ಬೆಳವಣಿಗೆಗಳನ್ನು ಅಂದಾಜಿಸುವುದು – ಇದನ್ನು ಮಾಡಿದಾಗ ವಾರ್ಷಿಕ ಯೋಜನೆಗೆ ಒಂದು ಖಚಿತವಾದ ಧೋರಣೆ ಸಿಗುತ್ತದೆ ಹೀಗೆ ಮಾಡಬೇಕಾಗುತ್ತದೆ ಎಂಬ ದಾರಿ ಕಾಣತೊಡಗುತ್ತದೆ. ಅದರ ಬೆಳಕಿನಲ್ಲಿ ವಾರ್ಷಿಕ ಯೋಜನೆ ತಯಾರಿಸಿದಲ್ಲಿ ವಾರ್ಷಿಕ ಆಯವ್ಯಯದ ಅಂದಾಜು ತನಗೆ ತಾನೇ ರೂಪಗೊಳ್ಳತೊಡಗುತ್ತದೆ. ಅದನ್ನು ಬರವಣಿಗೆಗೆ ಅಂಕಿ ಸಂಖ್ಯೆಗಳ ರೂಪದಲ್ಲಿ ಇಳಿಸುವ ಕೆಲಸವಾಗುತ್ತದೆ. ಆದ್ದರಿಂದಲೇ ಸೌಹಾರ್ದ ಕಾಯಿದೆಯ ಸೆಕ್ಷನ್ 23 (ಜಿ) ಮತ್ತು 23 (ಹೆಚ್)ಗಳನ್ನು ಗಮನಿಸಿದಾಗ ಮೊದಲು ದೀರ್ಘಾವಧಿ ಯೋಜನೆ, ನಂತರ ವಾರ್ಷಿಕ ಯೋಜನೆ ಮತ್ತು ವಾರ್ಷಿಕ ಆಯವ್ಯಯ ಅಂದಾಜು–ಇವುಗಳನ್ನು ಮಹಾಸಭೆಯ ಕೆಲಸಗಳಲ್ಲಿ ಅನುಕ್ರಮವಾಗಿ ನಮೂದಿಸಿರುವುದನ್ನು ಕಾಣಬಹುದು ಸಂಸ್ಥೆಗಳ ಆರ್ಥಿಕ ಯಶಸ್ಸಿಗೆ ಈ ರೀತಿಯ ಕಾರ್ಯಕ್ರಮ ಅಗತ್ಯ.

ಈ ರೀತಿ ಅಂಕಿ ಅಂಶಗಳ ತಯಾರಿಕೆಯ ಕೆಲಸವೇ ಒಂದು ವೈಜ್ಞಾನಿಕ ವಿಧಾನವಾಗಿ ಈಗ ಬೆಳೆದುಬಿಟ್ಟಿದೆ. ಈಗ ದೊಡ್ಡ ದೊಡ್ಡ ಸಂಸ್ಥೆಗಳು ತಮ್ಮ ಎಲ್ಲ ಆರ್ಥಿಕ ತಃಖ್ತೆಗಳನ್ನು – ಎಂದರೆ ಲಾಭ ನಷ್ಟ ತಃಖ್ತೆ, ಆಸ್ತಿ ಜವಾಬ್ದಾರಿ ತಃಖ್ತೆ ಇತ್ಯಾದಿಗಳನ್ನು–ಕೇವಲ ಒಂದೇ ಪುಟದಲ್ಲಿ ಸರಳವಾಗಿ ಸಂಗ್ರಹಿಸಿ ನೀಡುವ ಪದ್ಧತಿ ಇದೆ.ಈ ತಃಖ್ತೆಗಳ ಪ್ರತಿ ಅಂಶದ ವಿವರಗಳನ್ನು ಪ್ರತ್ಯೇಕವಾಗಿ ಪರಿಶಿಷ್ಟಗಳಲ್ಲಿ ಕೊಟ್ಟಿರುತ್ತಾರೆ. ಸಂಸ್ಥೆಯ ಒಟ್ಟು ಆರ್ಥಿಕ ಚಿತ್ರ ಒಂದೇ ಕಣ್‌ನೋಟದಲ್ಲಿ ಸಿಗಬೇಕು ಎಂಬುದೇ ಹೀಗೆ ಮಾಡುವುದರ ಉದ್ದೇಶ.

ಇದರಿಂದ ಅಗತ್ಯವಿದ್ದಲ್ಲಿ ತಕ್ಷಣವೇ ಈ ಅಂಕಿ ಅಂಶಗಳನ್ನು ಸಂಸ್ಥೆಯ ಆಯವ್ಯಯ ಪತ್ರಿಕೆಗೂ ಹೋಲಿಸಿ ಸಂಸ್ಥೆಯ ಆರ್ಥಿಕ ಬೆಳವಣಿಗೆ ಆಯವ್ಯಯದ ಅಂದಾಜುಗಳಿಗೆ ಅನುಸಾರವಾಗಿ ಸಾಗಿದೆಯೇ ಎಂದು ಬೇಗ ತಿಳಿದುಕೊಳ್ಳಬಹುದು. ಆದ್ದರಿಂದ ಆಯವ್ಯಯ ಪತ್ರಿಕೆಗಳೂ ಸಹ ಇದೇ ರೀತಿ ವಿವರಗಳನ್ನು ಬೆನ್ನಲ್ಲಿ ಕಟ್ಟಿಕೊಂಡಿರುವ ಚುಟುಕು ಚಿತ್ರಣಗಳಾಗಬೇಕಾಗುತ್ತದೆ. ವಾರ್ಷಿಕ ಆಯವ್ಯಯ ಅಂದಾಜು ಎಂಬುದು ಮೇಲ್ನೋಟಕ್ಕೆ ಸರಳವಾಗಿ ಕಾಣುತ್ತದೆ, ಆದರೆ ಇದು ಕೇವಲ ಸಿಬ್ಬಂದಿ ಸಂಬಳ, ಅಂಚೆ, ತೆರಿಗೆ ಹಾಗೂ ಬರಬೇಕಾದ ಬಡ್ಡಿ ಇತ್ಯಾದಿಗಳ ಲೆಕ್ಕವಲ್ಲ ಇದು ಇಡೀ ಸಂಸ್ಥೆಯು ಯಶಸ್ಸಿನ ಗುರಿಯತ್ತ ಸಾಗುವ ದಾರಿಯ ಮೆಟ್ಟಿಲು. ದೀರ್ಘಾವಧಿ ಯೋಜನೆಗಳು, ವಾರ್ಷಿಕ ಯೋಜನೆ, ಆಯವ್ಯಯ ಮುಂತಾದವು ಸಂಸ್ಥೆಯ ಆರ್ಥಿಕ ಉನ್ನತಿಯನ್ನು ಏರಲು ಇರುವ ಮೆಟ್ಟಿಲುಗಳ ಪಂಕ್ತಿಯಂತೆ ಇರುತ್ತದೆ. ಇದನ್ನು ಶ್ರದ್ಧೆ, ಸಾಮರ್ಥ್ಯ ಮತ್ತು ದೂರದರ್ಶಿತ್ವದಿಂದ ನಡೆಸಿಕೊಂಡು ಹೋಗುವುದು ಸಂಸ್ಥೆಗಳ ಆಡಳಿತವರ್ಗದವರ ಮತ್ತು ಸಿಬ್ಬಂದಿವರ್ಗದವರ ಆದ್ಯ ಕರ್ತವ್ಯ. ■

## ಒತ್ತಡ ನಿರ್ವಹಣಿ



ಶ್ರೀ ಬಿ. ಎ. ಮಹದೇವಪ್ಪ
ಜಂಟಿ ನಿಬಂಧಕರು

### ಭಾಗ-5

ಒಬ್ಬ ವ್ಯಕ್ತಿಯಲ್ಲಿ ಒತ್ತಡದಿಂದ ಮೂಡಿ ಬರುವ ಶಾರೀರಿಕ ಚಿಹ್ನೆಗಳನ್ನು ಕುರಿತು ನಿಮ್ಮ ಮುಂದೆ ಹತ್ತು ಪ್ರಶ್ನೆಗಳನ್ನು ನೀಡಲಾಗಿದೆ. ಅದೇ ರೀತಿ ಪ್ರತಿಯೊಂದು ಪ್ರಶ್ನೆಯ ಮುಂದೆ 'ಹೌದು' ಅಥವಾ 'ಇಲ್ಲ' ಎಂಬ ಉತ್ತರಗಳು ಇವೆ. ಪ್ರತಿಯೊಂದು ಪ್ರಶ್ನೆಯನ್ನು ನಿಧಾನವಾಗಿ ಓದಿ. ಆ ಚಿಹ್ನೆ ನಿಮ್ಮಲ್ಲಿ ಇದ್ದರೆ 'ಹೌದು' ಎಂಬುದರ ಮುಂದೆ...ಇಲ್ಲದಿದ್ದರೆ 'ಇಲ್ಲ' ಎಂಬುದರ ಮುಂದೆ ಟಿಕ್ ಹಾಕಿ. ಹತ್ತು ಪ್ರಶ್ನೆಗಳಿಗೂ ಉತ್ತರವನ್ನು ಕಂಡು ಹಿಡಿಯಿರಿ...

# ಒತ್ತಡದ ಮನೋ - ಶಾರೀರಿಕ ಚಿಹ್ನೆಗಳು

- ನಿಮ್ಮ ಊಟ ಉಪಹಾರಗಳ ಅಭ್ಯಾಸಗಳಲ್ಲಿ ಏರು ಪೇರಾಗುತ್ತಿದೆಯೆ? ಹೌದು/ಇಲ್ಲ
- ನಿಮ್ಮಲ್ಲಿ ಅತಿ ನಿದ್ರೆ ಅಥವಾ ನಿದ್ರೆಯೇ ಬಾರದಿರುವುದು ಉಂಟಾಗುತ್ತಿದೆಯೆ? ಹೌದು/ಇಲ್ಲ
- ನಿಮ್ಮ ಜೀರ್ಣಕ್ರಿಯೆಯಲ್ಲಿ ವ್ಯತ್ಯಾಸ ಉಂಟಾಗುತ್ತಿದೆಯೆ? ಹೌದು/ಇಲ್ಲ
- ನಿಮ್ಮಲ್ಲಿ ಆಗಾಗ್ಗೆ ಚಡಪಡಿಸುವುದು/ ಆದರುವಿಕೆ ಮುಂತಾದ ಅನುಭವಗಳಾಗುತ್ತಿವೆಯೆ? ಹೌದು/ಇಲ್ಲ
- ನಿಮ್ಮ ಹೃದಯದ ಬಡಿತ ಜಾಸ್ತಿಯಾಗುತ್ತಿರುವಂತೆ ಕಾಣಿಸಿ ಕೊಳ್ಳುತ್ತಿದೆಯೆ? ಹೌದು/ಇಲ್ಲ
- ನಿಮ್ಮಲ್ಲಿ ಆಗಾಗ್ಗೆ ತಲೆನೋವು/ಕತ್ತು, ಭುಜಗಳಲ್ಲಿ ನೋವು ಕಾಣಿಸಿಕೊಳ್ಳುತ್ತಿದೆಯೆ? ಹೌದು/ಇಲ್ಲ
- ನಿಮ್ಮಲ್ಲಿ ಅತಿಯಾದ ಚಟುವಟಿಕೆ ಕಂಡು ಬರುತ್ತಿದೆಯೆ? ಹೌದು/ಇಲ್ಲ
- ನಿಮ್ಮಲ್ಲಿ ಲೈಂಗಿಕ ಬಯಕೆ/ಕ್ರಿಯೆ ಮತ್ತು ಆನಂದ ಕ್ಷೀಣಿಸುತ್ತಿದೆಯೆ? ಹೌದು/ಇಲ್ಲ
- ನೀವು ಮದ್ಯಪಾನ ಅಥವಾ ಧೂಮಪಾನವನ್ನು ಹೆಚ್ಚಾಗಿ ಮಾಡುತ್ತಿರುವಿರಾ? ಹೌದು/ಇಲ್ಲ
- ಅನಿಯಂತ್ರಿತ ಮೂತ್ರ ವಿಸರ್ಜನೆ, ಮಲವಿಸರ್ಜನೆ, ಹಟಮಾರಿತನ ಉಂಟಾಗುತ್ತಿದೆಯೆ? ಹೌದು/ಇಲ್ಲ

ಇವು ಒತ್ತಡದಿಂದ ಉಂಟಾಗುವ ಶಾರೀರಿಕ ಚಿಹ್ನೆಗಳು.

ಇವುಗಳಲ್ಲಿ ಮೂರಕ್ಕಿಂತ ಜಾಸ್ತಿ ಕಾಣಿಸಿಕೊಂಡರೆ... ಮೂರಕ್ಕಿಂತ ಹೆಚ್ಚು 'ಹೌದು' ಉತ್ತರಗಳು ಬಂದರೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗುತ್ತದೆ.

ಈಗ ಒತ್ತಡದಿಂದ ಮೂಡಿ ಬರುವ ಮಾನಸಿಕ ಚಿಹ್ನೆಗಳನ್ನು ಗಮನಿಸೋಣ.

ಇಲ್ಲಿಯೂ ಹತ್ತು ಪ್ರಶ್ನೆಗಳಿವೆ. ಹತ್ತು ಪ್ರಶ್ನೆಗಳ ಮುಂದೆ 'ಹೌದು' ಅಥವಾ 'ಇಲ್ಲ' ಎರಡು ಉತ್ತರಗಳಿವೆ. ನಿಮಗೆ ನೀವೇ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಿ...

- ನೀವು ಕೀಳರಿಮೆಯಿಂದ ಕೊರಗುತ್ತಿದ್ದೀರಾ? ಹೌದು/ಇಲ್ಲ
- ನಗು, ನಲಿವು, ಯಶಸ್ಸು, ಒಳ್ಳೆಯ ದಿನಗಳು ಇನ್ನೆಂದೂ ಬರುವುದಿಲ್ಲವೆಂದು ನಿರಾಶಾವಾದಿಯಾಗಿದ್ದೀರಾ? ಹೌದು/ಇಲ್ಲ
- ನೀವು ಯಾವಾಗಲೂ ಸಿಡುಕು/ ಕೋಪಗೊಳ್ಳುತ್ತೀರಾ? ಹೌದು/ಇಲ್ಲ
- ಯಾವಾಗಲೂ ಬೇಸರ, ದುಃಖದ ಭಾವನೆಯಿದ್ದು, ಆಗಾಗ್ಗೆ ನೀವು ಅಳಬೇಕು ಅಂದುಕೊಳ್ಳುತ್ತೀರಾ? ಹೌದು/ಇಲ್ಲ
- ಯಾವುದೇ ವಿಚಾರದಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಆಗುತ್ತಿಲ್ಲ ಅನಿಸುತ್ತಿದೆಯೆ? ಹೌದು/ಇಲ್ಲ
- ಒಂದು ಕೆಲಸವನ್ನು ಮಾಡುತ್ತಿದ್ದಾಗ, ಅದನ್ನು ಅರ್ಧದಲ್ಲಿಯೇ ಬಿಟ್ಟು ಇನ್ನೊಂದು ಕೆಲಸವನ್ನು ಮಾಡಲು ಹೋಗುತ್ತೀರಾ? ಹೌದು/ಇಲ್ಲ
- ನಿಮ್ಮಲ್ಲಿ ಮರೆವು ಮತ್ತು ಏಕಾಗ್ರತೆಯ ಸಮಸ್ಯೆ ಇದೆಯಾ? ಹೌದು/ಇಲ್ಲ
- ನಿಮ್ಮಲ್ಲಿ ಅಪರಾಧ ಭಾವನೆ ಇದೆಯಾ? ಹೌದು/ಇಲ್ಲ
- ನನಗೆ ಯಾರೂ ಇಲ್ಲಾ...ನಾನು ಏಕಾಂಗಿ ಎನ್ನುವ ಭಾವನೆ ಉಂಟಾಗುತ್ತಿದೆಯಾ? ಹೌದು/ಇಲ್ಲ
- ನೀವು ಮಾಡುವ ಯಾವುದೇ ಕೆಲಸವೂ ಉತ್ತಮ ಫಲಿತಾಂಶ ಇಲ್ಲದೆ ವ್ಯರ್ಥವಾಗುತ್ತಿದೆಯೇ? ಹೌದು/ಇಲ್ಲ

ಈ ಬಗ್ಗೆ ನಿಮ್ಮ ಉತ್ತರಗಳು ಅಥವಾ 'ಹೌದು'ಗಳು 5 ಕ್ಕಿಂತ ಹೆಚ್ಚಾಗಿದ್ದರೆ, ನಿಮ್ಮಲ್ಲಿ ಒತ್ತಡದ ಬಗ್ಗೆ ಮಾನಸಿಕ ಸಮಸ್ಯೆ ಇದೆ ಎಂದು ಹೇಳಬಹುದು.

ಮೇಲಿನ ಎರಡು ಪ್ರಶ್ನೋತ್ತರಗಳಲ್ಲಿ ನಮ್ಮ ಮನಸ್ಸು ಮತ್ತು ಶರೀರಗಳ ಮೇಲೆ ಒತ್ತಡವು ನೆಗೆಟಿವ್ ಪ್ರಭಾವ ಬೀರುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ಈ ನೆಗೆಟಿವ್ ಪ್ರಭಾವ ದೀರ್ಘಕಾಲ ಇದ್ದರೆ, ನಮ್ಮಲ್ಲಿ ಅಧಿಕ ರಕ್ತ ಒತ್ತಡ ಉಂಟಾಗುತ್ತದೆ. ಜೀರ್ಣಕ್ರಿಯೆ ಏರುಪೇರಾಗುತ್ತದೆ. ಅಂಗಾಂಗಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ ಮತ್ತು ರೋಗ ನಿರೋಧಕ ಶಕ್ತಿ ತಗ್ಗುತ್ತದೆ. ಮುಂದೆ ಶರೀರ ಮತ್ತು ಮನಸ್ಸುಗಳೆರಡರ ಸಮತೋಲನ ಮುರಿದುಬಿದ್ದು, ಶಾರೀರಿಕ ಮತ್ತು ಮಾನಸಿಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ.

ಒಬ್ಬ ವ್ಯಕ್ತಿಯ ಶರೀರ ಮತ್ತು ಮನಸ್ಸಿನ ಸಮತೋಲನ ತಪ್ಪಿ ಹೋಗುವ ಸ್ಥಿತಿಯನ್ನು ನೆಮ್ಮದಿ ರಹಿತ ಸ್ಥಿತಿ ಎನ್ನುತ್ತಾರೆ. ಈ ನೆಮ್ಮದಿ ರಹಿತ ಸ್ಥಿತಿಯನ್ನೇ ಒತ್ತಡ ಎನ್ನಲಾಗಿದೆ. ನೆಮ್ಮದಿ ರಹಿತ ಸ್ಥಿತಿಗೆ ಕಾರಣವಾದ ಸಮಸ್ಯೆ ಬಗೆಹರಿಯುವವರೆಗೂ ಈ ಒತ್ತಡ ಮುಂದುವರೆಯುತ್ತದೆ. ಅನಂತರ ಒತ್ತಡದ ತೀವ್ರತೆ ಕಡಿಮೆಯಾಗುತ್ತಾ ಬಂದು ಆ ವ್ಯಕ್ತಿ ಸಹಜ ಸ್ಥಿತಿಗೆ ಬರುತ್ತಾನೆ. ಇಲ್ಲದಿದ್ದರೆ ಒತ್ತಡದ ಪರಿಣಾಮ ತೀವ್ರವಾಗುತ್ತದೆ.

ಒತ್ತಡದ ಸ್ಥಿತಿಯನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು.

**1. ದೈಹಿಕ ಒತ್ತಡ :** ಕೊರೆಯುವ ಚಳಿ, ಅತಿಯಾದ ಶಾಖ, ಪ್ರತಿದಿನವೂ ದೀರ್ಘಕಾಲಿಕ ದುಡಿತ, ಭಾರವಾದ ವಸ್ತುವನ್ನು ಹೊರುವುದು, ಬೆಟ್ಟ ಹತ್ತುವುದು, ತುಂಬಾ ದೂರ ಓಡುವುದು, ಬಹಳ ಕಾಲ ವ್ಯಾಯಾಮ ಮಾಡುವುದು, ಶ್ರಮದಾಯಕ ಕೆಲಸಗಳನ್ನು ಮಾಡುವುದು–ಇವುಗಳಿಂದ ದೈಹಿಕ ಒತ್ತಡ ಉಂಟಾಗುತ್ತದೆ. ಈ ರೀತಿಯ ಒತ್ತಡಗಳು ಗಂಭೀರವೂ ಅಲ್ಲ, ದೀರ್ಘಕಾಲವೂ ಅಲ್ಲ. ಸ್ವಲ್ಪ ಸಮಯದಲ್ಲಿಯೇ ಒತ್ತಡದಿಂದ ಮುಕ್ತವಾಗಲು ಸಾಧ್ಯವಿದೆ.

**2. ಮಾನಸಿಕ ಒತ್ತಡ :** ಹತಾಶೆ, ಘರ್ಷಣೆ, ಭಯ–ಬೆದರಿಕೆಗಳಿಂದ ಮಾನಸಿಕ ಒತ್ತಡ ಉಂಟಾಗುತ್ತದೆ. ಈ ಬಗ್ಗೆ ರಿಲ್ಯಾಕ್ಸ್ ಟೆಕ್ನಿಕ್‌ಗಳನ್ನು ಅಳವಡಿಸಿಕೊಂಡರೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯವಿದೆ.

**3. ಭಾವನಾತ್ಮಕ ಒತ್ತಡ :** ಬಾಳಸಂಗಾತಿ, ತಂದೆ, ತಾಯಿ ಅಥವಾ ಒಡಹುಟ್ಟಿದವರ, ಆತ್ಮೀಯರ ಸಾವು, ಉದ್ಯೋಗದಲ್ಲಿ ನಷ್ಟ... ಮುಂತಾದವುಗಳು ಭಾವನಾತ್ಮಕ ಒತ್ತಡ ಎನಿಸಿಕೊಳ್ಳುತ್ತವೆ. ಇವು ತೀವ್ರ ಒತ್ತಡವನ್ನು ಉಂಟು ಮಾಡುತ್ತವೆ. ಈ ಬಗ್ಗೆ ಮನೋವೈದ್ಯರ ನೆರವು ಅವಶ್ಯಕವಾಗುತ್ತದೆ.

ಒಬ್ಬ ವ್ಯಕ್ತಿ ಬಹಳ ಕಾಲ ಒತ್ತಡಕ್ಕೆ ಒಳಗಾದರೆ, ಅವನ ಒತ್ತಡದ ಪ್ರಮಾಣ ಎಷ್ಟು ಇರುತ್ತದೆ ಎಂಬುದರ ಬಗ್ಗೆ ಹಾಮ್ಸ್ (Holmes) ಮತ್ತು ಆತನ ಸಹೋದ್ಯೋಗಿಗಳು ಕೆಳಗಿನಂತೆ ತಿಳಿಸಿರುತ್ತಾರೆ.

ಒತ್ತಡದ ಘಟನೆ/ಸನ್ನಿವೇಶಗಳು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆಯೇ ಇರುತ್ತವೆ. ಆದ್ದರಿಂದ ಎಲ್ಲ ಘಟನೆಗಳು ಎಲ್ಲ ವ್ಯಕ್ತಿಗಳಿಗೆ ಒಂದೇ ಇರುವುದಿಲ್ಲ. ಅದೇ ರೀತಿ ಎಲ್ಲ ಘಟನೆಗಳು ಬಹಳ ಕಾಲ ಉಳಿಯುವುದಿಲ್ಲ. ಆದರೆ ಒತ್ತಡಕ್ಕೆ ಕಾರಣವಾಗುವ ಯಾವುದೇ ಘಟನೆ ಅಥವಾ ಸನ್ನಿವೇಶ ಬಹಳ ಕಾಲ ಉಳಿದಾಗ ಮಾತ್ರ ಒತ್ತಡದ ತೀವ್ರತೆ ಜಾಸ್ತಿ ಆಗುತ್ತದೆ. ಆಗ ವ್ಯಕ್ತಿಯು ಶಾರೀರಿಕ ಮತ್ತು ಮಾನಸಿಕವಾಗಿ ಕುಗ್ಗಿ ಹೋಗುತ್ತಾನೆ. ಈ ಹಿನ್ನೆಲೆಯಲ್ಲಿ ಒತ್ತಡದ ವಿವಿಧ ಘಟನೆ ಮತ್ತು ಪ್ರಮಾಣಗಳನ್ನು ಅವಲೋಕಿಸೋಣ...

# ಲೆಕ್ಕ ಪರಿಶೋಧಕರಿಗಾಗಿ ಕಾರ್ಯಾಗಾರಗಳು



ರಾಜ್ಯ ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆಯ ಕಾರ್ಯನಿರ್ವಹಿಸುವ ಲೆಕ್ಕಪರಿಶೋಧಕ ಪಟ್ಟಿಯನ್ನು ಪ್ರತಿ ಎರಡು ವರ್ಷಗಳಿಗೆ ಒಂದು ಬಾರಿ ಪರಿಷ್ಕರಿಸುತ್ತದೆ. ಪಟ್ಟಿ ಪರಿಷ್ಕರಿಸುವ ಮೊದಲು ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ಅಪೇಕ್ಷಿಸುವ ಲೆಕ್ಕ ಪರಿಶೋಧಕರಿಂದ ಅರ್ಜಿ ಆಹ್ವಾನಿಸಲಾಗುತ್ತದೆ ಅರ್ಜಿ ಸಲ್ಲಿಸಿದ ಎಲ್ಲ ಲೆಕ್ಕಪರಿಶೋಧಕರಿಗೆ ಸೌಹಾರ್ದ ಸಹಕಾರಿಯ ಕಾಯ್ದೆ, ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳು, ಇತರೆ ಕೆಲವು ಕಾಯ್ದೆಗಳ ಮುಖ್ಯಾಂಶಗಳು ಮುಂತಾದ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ.

ಸೌಹಾರ್ದ ಸಹಕಾರಿಗಳ ಹಿಂದಿನ ವರ್ಷಗಳಲ್ಲಿ ಲೆಕ್ಕ ಪರಿಶೋಧನೆ ಮಾಡುವ ಸಂದರ್ಭದಲ್ಲಿ ಲೆಕ್ಕಪರಿಶೋಧಕರು ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳನ್ನು ಗಮನಿಸದೆ ಇರುವ ಹಾಗೂ ಇತರೆ ಕೆಲವು ಅಂಶಗಳ ಬಗ್ಗೆ ಚರ್ಚೆ ಮಾಡುವ ಹಾಗೂ ಲೆಕ್ಕಪರಿಶೋಧಕರ ಗುರುತರ ಜವಾಬ್ದಾರಿಗಳ ಮನರ್ಮನನ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ದಿನಾಂಕ 25-1-2011ರಂದು ಬೆಳಗಾವಿಯಲ್ಲಿ ದಿನಾಂಕ 27-1-2011 ರಂದು ಗುಲ್ಬರ್ಗಾದಲ್ಲಿ ದಿನಾಂಕ 31-1-2011 ರಂದು ಏರ್ಪಡಿಸಲಾಗಿತ್ತು.

ಬೆಂಗಳೂರಿನಲ್ಲಿ ನಡೆದ ಕಾರ್ಯಾಗಾರದಲ್ಲಿ 187 ಲೆಕ್ಕ ಪರಿಶೋಧಕರು ಭಾಗವಹಿಸಿದ್ದರು. ಕಾರ್ಯ ಕ್ರಮವನ್ನು ಸಹಕಾರಿ ನಿಬಂಧಕರ ಕಚೇರಿಯಲ್ಲಿ ಕಾನೂನು ಕೋಶ ವಿಭಾಗದ ಜಂಟಿನಿಬಂಧಕರಾದ ಶ್ರೀ ಕೆ.ಎಸ್.ನವೀನರವರು ಉದ್ಘಾಟಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಲೆಕ್ಕ ಪರಿಶೋಧಕರ ಜವಾಬ್ದಾರಿ ಹೆಚ್ಚಿನದು ಎಂದು ತಿಳಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರರವರು ವಹಿಸಿದ್ದರು.

ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಪ್ರಾಸ್ತಾವಿಕ ಭಾಷಣ ಮಾಡಿದರು. ಸಾಗರದ ಚಾರ್ಟರ್ಡ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ ಲೆಕ್ಕ ಪರಿಶೋಧಕರ ಕಾರ್ಯ ವ್ಯಾಪ್ತಿ, ಗಮನಿಸಬೇಕಾದ ವಿಷಯಗಳು, ಲೆಕ್ಕ ಪರಿಶೋ ಧನಾ ಕ್ರಮ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸದ ನೀಡಿದರು. ಈ ಅಧಿವೇಶನದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಲೆಕ್ಕ ಪರಿಶೋಧಕ ಶ್ರೀ ಮಧುಕರ ಹೆಗಡೆಯವರು ವಹಿಸಿದ್ದರು. ಕೊನೆಯಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು.

ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಕರ್ನಾಟಕ ಸರಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ರಾವಸಾಹೇಬ ಪಾಟೀಲರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಸಾಗರ ಚವಜರವರು, ಸದರನ್ ಇಂಡಿಯಾ ರಿಜನಲ್ ಕೌನ್ಸಿಲಿನ ಬೆಳಗಾವಿ ಶಾಖೆಯ ಅಧ್ಯಕ್ಷ ಶ್ರೀ ಚಂದರಗಿ, ಬೆಳಗಾವಿ ಜಿಲ್ಲಾ ಚಾರ್ಟರ್ಡ ಅಕೌಂಟೆಂಟರುಗಳ ಅಸ್ಸೋಸ್ಸಿಯೇಶನ್ ಅಧ್ಯಕ್ಷ ಶ್ರೀ ಪಾಂಡುರಂಗ ಶಿಂಪಿಯವರು, ಬೆಳಗಾವಿ ವಿಭಾಗದ 158 ಲೆಕ್ಕ ಪರಿಶೋಧಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಶ್ರೀ ಬಿ.ವಿ.ರವೀಂದ್ರನಾಥರವರು ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಗುಲ್ಬರ್ಗಾದಲ್ಲಿ ಕಾಯಾಗಾರವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಶಾಂತಿನಾಥ ಪಂಡಿತ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 32 ಲೆಕ್ಕಪರಿಶೋಧಕರು ಭಾಗವಹಿಸಿದ್ದರು. ಶ್ರೀ ಬಿ.ವಿ.ರವೀಂದ್ರನಾಥರವರು ಕಾರ್ಯಾಗಾರವನ್ನು ನಡೆಸಿಕೊಟ್ಟರು.



| ಕ್ರ.ಸಂ. | ಒತ್ತಡದ ಘಟನೆಗಳು | ಒತ್ತಡದ ಪ್ರಮಾಣ |
|---|---|---|
| 1 | ಕಾನೂನಿನ ಸಣ್ಣ ಪುಟ್ಟ ಉಲ್ಲಂಘನೆಗಳು | 11 |
| 2 | ಹಬ್ಬ ಹರಿದಿನಗಳು | 12 |
| 3 | ಊಟ ಉಪಹಾರಗಳಲ್ಲಿ ವ್ಯತ್ಯಾಸ | 15 |
| 4 | ನಿದ್ರಾ ಕ್ರಮದಲ್ಲಿ ವ್ಯತ್ಯಾಸ | 16 |
| 5 | ಆಭರಣಗಳನ್ನು ಅಡವಿಡುವುದು | 17 |
| 6 | ಶಾಲಾ-ಕಾಲೇಜಿನ ಬದಲಾವಣೆ | 19 |
| 7 | ಮನೆ ಕೆಲಸಗಳಲ್ಲಿ ಬದಲಾವಣೆ | 20 |
| 8 | ಉದ್ಯೋಗದ ಸ್ಥಿತಿ-ಗತಿಯಲ್ಲಿ ಬದಲಾವಣೆ | 20 |
| 9 | ಮೇಲಧಿಕಾರಿಗಳೊಡನೆ ವಿರಸ | 23 |
| 10 | ಜೀವನದ ಸ್ಥಿತಿಗತಿಗಳಲ್ಲಿ ಬದಲಾವಣೆ | 25 |
| 11 | ಶಾಲಾ-ಕಾಲೇಜಿನ ಪ್ರಾರಂಭ ಅಥವಾ ಮುಕ್ತಾಯ | 26 |
| 12 | ಬಾಳಸಂಗಾತಿ ಉದ್ಯೋಗಕ್ಕೆ ಸೇರುವುದು/ಬಿಡುವುದು | 26 |
| 13 | ಅಸಾಧಾರಣೆ ಸಾಧನೆ | 28 |
| 14 | ಅತ್ತೆ, ಮಾವ, ನಾದಿನಿ ಇತ್ಯಾದಿಯರ ಕಾಟ | 29 |
| 15 | ಮಗ ಅಥವಾ ಮಗಳು ಮನೆ ಬಿಟ್ಟು ಹೋಗುವುದು | 29 |
| 16 | ಸಾಲ ತೀರಿಸುವಿಕೆ | 30 |
| 17 | ಗೃಹ ಕಲಹ | 35 |
| 18 | ಆಪ್ತ ಮಿತ್ರನ ಸಾವು | 37 |
| 19 | ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆ | 38 |
| 20 | ಕುಟುಂಬಕ್ಕೆ ನೂತನ ವ್ಯಕ್ತಿ ಆಗಮನ | 39 |
| 21 | ಲೈಂಗಿಕ ತೊಂದರೆಗಳು | 39 |
| 22 | ಗರ್ಭಿಣಿ ಆಗುವುದು | 40 |
| 23 | ಕುಟುಂಬದ ಸದಸ್ಯರ ಅನಾರೋಗ್ಯ | 44 |
| 24 | ಉದ್ಯೋಗದಿಂದ ನಿವೃತ್ತಿ | 45 |
| 25 | ಕೆಲಸದಿಂದ ವಜಾ | 47 |
| 26 | ಮದುವೆ | 50 |
| 27 | ಸ್ವತಹ ಕಾಯಿಲೆ ಅಥವಾ ಅಪಘಾತ | 53 |
| 28 | ಕುಟುಂಬದ ಆತ್ಮೀಯ ಬಂಧುವಿನ ಮರಣ | 63 |
| 29 | ಗಂಡ ಹೆಂಡತಿ ಬೇರೆ ಬೇರೆ ಇರುವುದು | 65 |
| 30 | ಡೈವೋರ್ಸ್ | 73 |
| 31 | ಬಾಳಸಂಗಾತಿಯ ಮರಣ | 100 |

-ಮುಂದುವರೆಯುತ್ತದೆ.

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

# ಠೇವುಗಳ ಮೇಲೆ ದ್ರವ್ಯಾಸ್ತಿ ನಿರ್ವಹಣೆ

ಜಿ.ಎಸ್. ಟೋಪಣ್ಣನವರ್
ವಿಭಾಗಾಧಿಕಾರಿ, ಬೆಳಗಾವಿ.

ಸಹಕಾರಿಗಳು ತಮ್ಮ ಸದಸ್ಯರಿಂದ ಸ್ವೀಕರಿಸುವ ಠೇವುಗಳ ಮೇಲೆ ದ್ರವ್ಯಾಸಿ ನಿರ್ವಹಣೆ ಬಗ್ಗೆ ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳು ಇದ್ದಾಗ್ಯೂ ಸಹ ಅನೇಕ ಸಹಕಾರಿಗಳು ಮಾರ್ಗಸೂಚಿಗಳನ್ನು ಪಾಲಿಸುತ್ತಿಲ್ಲ. ರಾಜ್ಯದ ಸೌಹಾರ್ದ ಸಹಕಾರಿಗಳ ಜಿಲ್ಲಾವಾರು ಅವಲೋಕನಾ ಸಭೆಗಳಲ್ಲಿ ಹಾಗೂ ಲೆಕ್ಕಪರಿಶೋಧನಾ ವರದಿಗಳ ಪುನರಾವಲೋಕನೆ ನಡೆಸಿದ ಸಂದರ್ಭದಲ್ಲಿ ಅನೇಕ ಸಹಕಾರಿಗಳು ದ್ರವ್ಯಾಸ್ತಿಗಳನ್ನು ನಿರ್ವಹಣೆ ಮಾಡದೆ ಇರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಸಹಕಾರಿಗಳಿಗೆ ಸರಿಯಾದ ದ್ರವ್ಯಾಸ್ತಿಗಳನ್ನು ನಿರ್ವಹಣೆಯ ಬಗ್ಗೆ ಮತ್ತೊಮ್ಮೆ ಮಾಹಿತಿ ನೀಡುವುದು ಅಗತ್ಯವೆಂದು ಪರಿಗಣಿಸಿ ಈ ಲೇಖನವನ್ನು ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 53(7) (ಎ) ರ ಅಡಿ 7 ಫೆಬ್ರುವರಿ 2008ರಂದು ಪರಿಪತ್ರ ಸಂಖ್ಯೆ 2/2007/08ವನ್ನು ಪತ್ತಿನ ವ್ಯವಹಾರ ಮಾಡುವ ಸೌಹಾರ್ದ ಸಹಕಾರಿ ಸಂಸ್ಥೆಗಳು ದ್ರವ್ಯಾಸ್ತಿ ಇಡುವಿಕೆಯ ಕುರಿತು ಮಾರ್ಗಸೂಚಿಯನ್ನು ಹೊರಡಿಸಿರುತ್ತಾರೆ. ಸದರಿ ಮಾರ್ಗಸೂಚಿಯು ಶಾಸನಬದ್ಧ ಹಾಗೂ ಕಡ್ಡಾಯವಾಗಿ ಅನುಸರಿಸಬೇಕಾದದ್ದು (Statutory and Mandatory) ಇದ್ದು ಅದನ್ನು ಎಲ್ಲ ಸಂಬಂಧ ಪಟ್ಟ ಸೌಹಾರ್ದ ಸಂಸ್ಥೆಗಳು ಕಡಾಯವಾಗಿ ಅನುಸರಿಸ ಬೇಕಾಗುತ್ತದೆ. ವಿವರಗಳನ್ನು ಕೆಳಗೆ ಕೊಡಲಾಗಿದೆ.

**ಅ) ದ್ರವ್ಯಾಸ್ತಿ ಎಂದರೇನು?**

ದ್ರವ್ಯಾಸ್ತಿ ಎಂದರೆ ಸೌಹಾರ್ದ ಸಹಕಾರಿಯು ತನ್ನ ಠೇವುದಾರರಿಗೆ ಅವರು ಸಹಕಾರಿಯಲ್ಲಿ ಹೊಂದಿದ ಠೇವುಗಳನ್ನು ಸಂಸ್ಥೆಯ ಆಪತ್ಕಾಲದಲ್ಲಿ ವಾಪಸ್ಸು ಬೇಡಿದಾಗ ಅವರಿಗೆ ಪಾವತಿ ಮಾಡಲು ತಾನು ಹೊಂದಿರುವ ಆಸ್ತಿ.

**ಆ) ದ್ರವ್ಯಾಸ್ತಿ ಎಲ್ಲಿ ಹಾಗೂ ಹೇಗೆ ಜಮೆ ಇಡುವುದು/ ಹೊಂದುವುದು?**

ಕ್ರೆಡಿಟ ಸೌಹಾರ್ದ ಸಹಕಾರಿಗಳು ನಗದು ರೂಪದಲ್ಲಿ, ಸಹಕಾರಿ ಬ್ಯಾಂಕು, ವಾಣಿಜ್ಯ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ, ಚಾಲ್ತಿ ಖಾತೆ, ಅವಧಿ ಠೇವು ಖಾತೆಗಳಲ್ಲಿ ಹೊಂದಿದ ರಕ್ಕಮುಗಳು ಹಾಗೂ ಕಾಯ್ದೆ ಪ್ರಕಾರ ಸರ್ಕಾರಿ ಭದ್ರತೆಗಳಲ್ಲಿ ಮಾತ್ರ ಜಮೆ ಹೊಂದಿರುವ ರಕ್ಕಮು.

**ಇ) ಯಾವ ಹೂಡಿಕೆಯ ಹಣವು ದ್ರವ್ಯಾಸ್ತಿ ಆಗಲಾರದು?**

ಯಾವುದೇ ರಕ್ಕಮು ಬೇರೆ ಇತರ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿ/ಸಹಕಾರಿ ಸಂಘಗಳಲ್ಲಿ, ಸಕ್ಕರೆ ಕಾರ್ಖಾನೆಗಳ ಶೇರು, ಠೇವುಗಳಲ್ಲಿ, ಮ್ಯೂಚುಅಲ್ ಫಂಡಗಳಲ್ಲಿ ಇತ್ಯಾದಿ ಇಂತಹ ಯಾವುದೇ ತರಹದ ಸಂಸ್ಥೆಗಳಲ್ಲಿ/ನಿಧಿಗಳಲ್ಲಿ ಜಮೆ ಹೊಂದಿದ ರಕ್ಕಮು ದ್ರವ್ಯಾಸ್ತಿ ಆಗಲಾರದು. ಅಂತಹ ಹೂಡಿಕೆಗಳು ಕಾನೂನು ಮತ್ತು ಪರಿಪತ್ರದ ಉಲ್ಲಂಘನೆಯಾಗಿರುತ್ತವೆ.

**ಈ) ದ್ರವ್ಯಾಸ್ತಿ ಹಣವನ್ನು ಎಷ್ಟು ಇಡಬೇಕು?**

ಸಹಕಾರಿಗಳು ತಾವು ಪಡೆದ ಠೇವುಗಳ ಮೇಲೆ 20 ಪ್ರತಿಶತದಷ್ಟು ಕಡ್ಡಾಯವಾಗಿ ಹಣವನ್ನು ಮೇಲಿನ ಖಂಡಿಕೆ 'ಆ' ದಲ್ಲಿ ಬರೆದ ಸಂಸ್ಥೆಗಳಲ್ಲಿ ಹಾಗೂ ರೀತಿಯಲ್ಲಿ ಜಮೆ ಇಡಬೇಕು. ಇಲ್ಲಿ ಎಲ್ಲ ಕಾಲಕ್ಕೆ ದ್ರವ್ಯಾಸ್ತಿ ರೂಪದಲ್ಲಿ ಇಡುವ ಹಣವು ಸಹಕಾರಿಯು ಹೊಂದಿದ ಠೇವುಗಳ ಮೇಲೆ 20 ಪ್ರತಿಶತಕ್ಕಿಂತ ಕಡಿಮೆ ಇರಕೂಡದು. ಠೇವುಗಳು ಏರಿದಾಗ ದ್ರವ್ಯಾಸ್ತಿ ಇಡುವ ಹಣವು ಹೆಚ್ಚಾಗುತ್ತವೆ. ಠೇವುಗಳು ಕಡಿಮೆಯಾದಾಗ ದ್ರವ್ಯಾಸ್ತಿ ರೂಪದಲ್ಲಿ ಇಡಬೇಕಾದ ರಕ್ಕಮುಗಳು ಕಡಿಮೆಯಾಗುತ್ತವೆ. ಇದನ್ನು ದೈನಂದಿಕವಾಗಿ ತಿಳಿದುಕೊಂಡು ಸಹಕಾರಿಗಳು ದ್ರವ್ಯಾಸ್ತಿಯನ್ನು ಇಡುವ ವ್ಯವಸ್ಥೆಯನ್ನು ಹೊಂದಬೇಕು.

**ಉ) ದ್ರವ್ಯಾಸ್ತಿಯನ್ನು ಸಹಕಾರಿಗಳು ಏಕೆ ಹೊಂದಬೇಕು?**

ಸಹಕಾರಿ ಸಂಸ್ಥೆಗಳು ತನ್ನ ಸದಸ್ಯರಿಗೆ ಸಾಲ ಕೊಡುವ ಸಲುವಾಗಿ ಠೇವುಗಳನ್ನು ಸ್ವೀಕರಿಸುತ್ತದೆ. ಈ ಠೇವುಗಳು ಚಾಲ್ತಿ ಠೇವುಗಳು, ಉಳಿತಾಯ ಠೇವುಗಳು, ಅವಧಿ ಠೇವುಗಳು, ಪಿಗ್ಮಿ/ರಿಕರಿಂಗ ಠೇವುಗಳು ಆಗಿರಬಹುದು. ಚಾಲ್ತಿ ಮತ್ತು ಉಳಿತಾಯ ಠೇವುಗಳನ್ನು ಸಹಕಾರಿ ಸಂಸ್ಥೆಗಳು ಠೇವಿದಾರರು ಬೇಡಿದ ತಕ್ಷಣ ಪಾವತಿ ಮಾಡಬೇಕಾಗುತ್ತದೆ. ಆದರೆ ಅವಧಿ ಠೇವುಗಳು, ಪಿಗ್ಮಿ/ರಿಕರಿಂಗ ಠೇವುಗಳು ಸಹಕಾರಿಗಳಲ್ಲಿ ಕೆಲವು ವೇಳೆಗೆ ಜಮೆಯಿದ್ದು ಅವರು ಠೇವುಗಳ ಅವಧಿ ಮುಗಿದ ತಕ್ಷಣ ಅಥವಾ ಕೆಲವು ವೇಳೆ ಠೇವು ಅವಧಿ ಮುಗಿಯುವುದಕ್ಕಿಂತ ಮುಂಚೆಯು ಸಹ ಪಾವತಿ ಮಾಡಬೇಕಾಗುತ್ತದೆ. ಇಂತಹ ಠೇವುಗಳ ಮೇಲೆ ಠೇವುದಾರರು ಸಹಕಾರಿಗಳ ನಿಯಮಗಳ ಪ್ರಕಾರ ಗರಿಷ್ಠ ಮಿತಿಯ ವರೆಗೆ ಸಾಲಗಳನ್ನು ಅವರ ಬೇಡಿಕೆಯ ಮೇರೆಗೆ ಕೂಡಲೇ ಕೊಡಬೇಕಾಗುತ್ತದೆ. ಆದರೆ ಸಹಕಾರಿಯು ತಾನು ಸ್ವೀಕರಿಸಿದ ಎಲ್ಲ ಠೇವುಗಳನ್ನು ಸಂಪೂರ್ಣವಾಗಿ ಸಾಲ ಮಂಜೂರಿಗಾಗಿ ಬಳಸಿದರೆ ಠೇವಿದಾರರು ಮೇಲಿನಂತೆ ರಕ್ಕಮು ಬೇಡಿದಾಗ ಕೊಡಲು ಸಾಧ್ಯವಾಗುವುದಿಲ್ಲ.

ಸಹಕಾರಿಯು ತಾನು ಹೊಂದಿದ ಶೇರು ಬಂಡವಾಳ ಹಾಗೂ ಕಾಯ್ದಿಟ್ಟ ನಿಧಿಗಳಷ್ಟು ಆಗುವ ಸಂಪೂರ್ಣ ಹಣವನ್ನು ಹಾಗೂ ಠೇವುಗಳ 80 ಪ್ರತಿಶತದಷ್ಟು ಹೀಗೆ ಆಗುವ ಒಟ್ಟು ಹಣವನ್ನು ಸಾಲ ರೂಪದಲ್ಲಿ ತೊಡಗಿಸಲು ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಅವಕಾಶವಿರುತ್ತದೆ. ಈ ರಕ್ಕಮುಗಳನ್ನು ಸಹಕಾರಿಯು ತನ್ನ ದೈನಂದಿನ ಸಾಲಗಳ ಮಂಜೂರಿಗೆ ಹಾಗೂ ಠೇವುಗಳ ಮರುಪಾವತಿಗೆ ಹಾಗೂ ಅವುಗಳ ಮೇಲೆ ಕೊಡುವ ಸಾಲಗಳಿಗೆ ಉಪಯೋಗಿಸಲು ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಅವಕಾಶವಿರುವುದು. ಸಹಕಾರಿಯು ದೈನಂದಿಕವಾಗಿ ಈ ಪ್ರಕಾರ ತನ್ನ ಸಾಲ ಮತ್ತು ಠೇವುಗಳ ವ್ಯವಹಾರಗಳನ್ನು ನಿರ್ವಹಿಸಬೇಕಾಗುತ್ತದೆ.

ಸದಸ್ಯರಿಗೆ ಕೊಟ್ಟ ಸಾಲಗಳು ವೇಳೆಗೆ ಸರಿಯಾಗಿ ಮರುಪಾವತಿಯಾಗದೇ ಇದ್ದ ಪರಿಸ್ಥಿತಿಯಲ್ಲಿ ಸಂಸ್ಥೆಯು ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿದಾಗ ಠೇವಿದಾರರ ಠೇವುಗಳ ಬೇಡಿಕೆಗಳನ್ನು ನಿರ್ವಹಿಸಲು ದ್ರವ್ಯಾಸ್ತಿ ರೂಪದಲ್ಲಿ ಜಮೆ ಇಟ್ಟ ರಕ್ಕಮನ್ನು ಸಹಕಾರಿಯು ಅನಿವಾರ್ಯವಾಗಿ ಕೆಲ ಕಾಲ ವಿನಿಯೋಗಿಸಿಕೊಳ್ಳಬಹುದಾಗಿದೆ. ಹೀಗೆ ದ್ರವ್ಯಾಸ್ತಿ ಹಣವನ್ನು ವಿನಿಯೋಗಿಸಿಕೊಂಡಲ್ಲಿ ಬಾಕಿ ಉಳಿದಿರುವ ದ್ರವ್ಯಾಸ್ತಿ ರಕ್ಕಮು ಆಗ ಸಹಕಾರಿಯು ಹೊಂದಿದ ಠೇವುಗಳ ಮೇಲೆ 20 ಪ್ರತಿಶತಕ್ಕಿಂತ ಕಡಿಮೆ ಆಗಿದ್ದಲ್ಲಿ ಅಂತಹ ಕೊರತೆಯಾದ ರಕ್ಕಮನ್ನು ಕೂಡಲೇ ಜಮೆ ಮಾಡಬೇಕಾಗುತ್ತದೆ.

ಇಂತಹ ಪ್ರಸಂಗಗಳು ಉದ್ಭವಿಸದಂತೆ ಸಹಕಾರಿಯು ತನ್ನ ಸಾಲಗಳ ವ್ಯವಹಾರವನ್ನು, ಸಾಲ ವಸೂಲಿಗಳನ್ನು ಸರಿಯಾಗಿ ಹಾಗೂ ಸರಿಯಾದ ವೇಳೆಯಲ್ಲಿ ಅಚ್ಚುಕಟ್ಟಾಗಿ ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿ ಎದುರಾಗದಂತೆ ಸಹಕಾರಿಯು ತನ್ನ ದೈನಂದಿಕ ಚಟುವಟಿಕೆಗಳಲ್ಲಿ ಎಲ್ಲ ಅವಶ್ಯಕ ಕ್ರಮಗಳನ್ನು ಹಾಗೂ ಆರ್ಥಿಕ ಶಿಸ್ತುಗಳನ್ನು ನಿಯಮಿತವಾಗಿ ಹಾಗೂ ವ್ಯವಸ್ಥಿತವಾಗಿ ರೂಪಿಸಿಕೊಂಡು ಆಡಳಿತ ನಡೆಸಬೇಕಾಗುತ್ತದೆ. ಇಂತಹ ಸಂದಿಗ್ಧ ಪರಿಸ್ತಿತಿ ಬಂದಾಗ ಸಹಕಾರಿಯು ಠೇವಿದಾರರ ಠೇವುಗಳನ್ನು ಅವರ ಬೇಡಿಕೆಯ ಮೇರೆಗೆ ಪಾವತಿ ಮಾಡುವ ಸಲುವಾಗಿ ಸಹಕಾರಿಯು ತಾನು ಹೊಂದಿದ ಠೇವುಗಳ ಮೇಲೆ 20 ಪ್ರತಿಶತದಷ್ಟು ಹಣವನ್ನು ದ್ರವ್ಯಾಸ್ತಿಯ ರೂಪದಲ್ಲಿ ಜಮೆ ಹೊಂದಬೇಕಾಗುತ್ತದೆ. ಇದು ಸಂಸ್ಥೆಯ ಹಿತದೃಷ್ಟಿಯಿಂದ ಕಡ್ಡಾಯವಾಗಿರುತ್ತದೆ.

## ಅನಧಿಕೃತ ಶಾಖೆ ತೆರೆದ ಸೌಹಾರ್ದ ಸಹಕಾರಿಯ ಮೇಲೆ ಕಾನೂನು ಕ್ರಮ

ವಿಜಯಪರ್ವ ಸೌಹಾರ್ದ ಸಹಕಾರಿ ಹೊಸಪೇಟೆ, ಇದು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ವ್ಯಾಪ್ತಿಯ ನೊಂದಣಿಪಡೆದು ಕಾರ್ಯ ನಿರ್ವಹಿಸುತ್ತಿದ್ದು, ಅನಧಿಕೃತವಾಗಿ ವ್ಯಾಪ್ತಿಯ ಹೊರಗಡೆ ಅಂದರೆ ಬಳ್ಳಾರಿ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ಶಾಖೆ ತೆರೆದು ಸಿಕ್ಕಿಬಿದ್ದ ಇವರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ. ತನಿಖಾ ಕಾರ್ಯ ಮುಂದುವರೆದಿದೆ.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲಗೋಳ ಕಾಂಪ್ಲೆಕ್ಸ್, ಕಿರಿಗಲ್ಲಿ, ಬೆಳಗಾವಿ – 1. ದೂ. 0831–2401551

ಇವರಿಂದ ಪ್ರಕಟಿತ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಶೇಷಾದ್ರಿ ಹನುಮಂತಪ್ಪ ರಸ್ತೆ ಬೆಂಗಳೂರು– 560 002
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ. ಮುದ್ರಣ : ... ಬೆಂಗಳೂರು ಸಂಚಿಕೆ ...